**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |


# ಬೃಹಚ್ಚರಣ

**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | - 25,000/- |
| ಪೋಷಕರು | - 5,000/- |
| ಸದಸ್ಯತ್ವ | - 1,000/- |
| ವಾರ್ಷಿಕ ನಿರ್ವಹಣೆ | - 250/- |

ಸಂಪುಟ : 5 ಸಂಚಿಕೆ : 1 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜನವರಿ-ಮಾರ್ಚ್ 2015



## ಅರ್ಪಣೆ

ಈ ಸಂಚಿಕೆಯನ್ನು ನಮ್ಮ ಸಮುದಾಯದ ಹಿತೈಷಿಗಳಾದ ನಾಗವಾರಪಾಳ್ಯ **ಶ್ರೀ ಶ್ರೀಕಂಠಯ್ಯ** ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಲಾಗಿದೆ

## ಸಂಪಾದಕೀಯ

ಮಾನ್ಯರೆ,

ನಮ್ಮ ಸಂಘವನ್ನು ಕಟ್ಟಿ, ಬೆಳೆಸಿ, ಸೇವೆ ಸಲ್ಲಿಸಿರುವವರನ್ನು ಸ್ಮರಿಸಿರುವುದು ನಮ್ಮ ಕರ್ತವ್ಯ, ಅಂತೆಯೇ ನಮ್ಮ 'ಬೃಹಚ್ಚರಣ' ಪತ್ರಿಕೆಯ ಪ್ರತಿ ಸಂಚಿಕೆಯನ್ನು ಹಿರಿಯ ಮಹನೀಯರಿಗೆ ಅರ್ಪಿಸಿ ಗೌರವಿಸುತ್ತಿದ್ದೇವೆ.

ಸಜ್ಜನರಾದ ತಾವು ನೀಡುವ ಉತ್ತಮ ಸಲಹೆಗಳನ್ನು ವಾರ್ತಾಪತ್ರದಲ್ಲಿ ಅಳವಡಿಸಿಕೊಂಡಿರುವುದರಿಂದ 'ಬೃಹಚ್ಚರಣ' ಪತ್ರಿಕೆಯು ಸಮುದಾಯದ ಸಾಂಸ್ಕೃತಿಕ ಕೈಗನ್ನಡಿಯಂತಿದೆ ಎಂದು ಎಲ್ಲರಿಂದ ಪ್ರಶಂಶಿಸಲ್ಪಡುತ್ತಿದೆ. ಇದಕ್ಕೆ ಕಾರಣರಾದ ಸಂಘದ ಕಾರ್ಯಕಾರಿ ಸಮಿತಿಗೆ ಧನ್ಯವಾದ. ಮುಂದೆಯೂ ಉತ್ತಮ ಲೇಖನಗಳನ್ನು ತಮಗೆ ಕೊಡುವ ಭರವಸೆ ಇದೆ. ಸಹಕಾರ ನೀಡುತ್ತಿರುವ ಎಲ್ಲರಿಗೂ ಧನ್ಯವಾದಗಳು.

'ಬೃಹಚ್ಚರಣ' ಪತ್ರಿಕೆಯ ಪ್ರಕಟಣೆಗೆ ಪ್ರಾಯೋಜಕರಾಗಿರುವ ಸದಸ್ಯರಿಗೆ ಧನ್ಯವಾದಗಳು.

ನಿಮ್ಮವ

■ ಕೆ.ಸಿ.ನಟರಾಜನ್

ಸಂಪಾದಕ, 9845113475

### ಶ್ರೀ ಸುಬ್ರಹ್ಮಣ್ಯ ಸ್ತೋತ್ರ

ಷಡಾನನಂ ಕುಂಕುಮರಕ್ತ ವರ್ಣಂ
ಮಹಾಮತಿಂ ದಿವ್ಯ ಮಯೂರವಾಹನಂ ।
ರುದ್ರಸ್ಯ ಸೂನುಂ ಸುರಯೂಥನಾಥಂ
ಗುಹಂ ಸದಾಹಂ ಶರಣಂ ಪ್ರಪದ್ಯೇ ॥

## ನಾಗಾರಾಧನೆಯ ವಿಶೇಷಾಂಕ

## ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ, ನಮಸ್ಕಾರ.

ಬೃಹಚ್ಚರಣ ಬಂಧುಗಳಿಗೆ ಶ್ರೀ ಮನ್ಮಥನಾಮ ಸಂವತ್ಸರದ ಹಾರ್ದಿಕ ಶುಭಾಶಯಗಳು. ನಮ್ಮ ಎಲ್ಲ ಕಾರ್ಯಚಟುವಟಿಕೆಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸುತ್ತಿರುವ ತಮಗೂ, ತಮ್ಮ ಕುಟುಂಬದ ಸದಸ್ಯರಿಗೂ ಭಗವಂತನು ಸಕಲ ಸನ್ಮಂಗಳವನ್ನುಂಟು ಮಾಡಲೆಂದು ಪ್ರಾರ್ಥಿಸುತ್ತೇನೆ.

ಸೋಮವಾರ 23.2.2015ರಂದು ನಾಗೇಶ್ವರ ಕ್ಷೇತ್ರ ಕಿತ್ತಿಗಾನಹಳ್ಳಿಯಲ್ಲಿ ನಡೆದ ನಾಗಾರಾಧನೆ ಸಮಾರಂಭದಲ್ಲಿ ಸಹಕರಿಸಿದ ಪ್ರತಿಯೊಬ್ಬರಿಗೂ ಮತ್ತು ವೇ.ಬ್ರ.ಶ್ರೀ ನಂಜುಂಡ ದೀಕ್ಷಿತರಿಗೂ ಹಾಗೂ ಸಹೋದರರಿಗೆ ಸಂಘವು ಚಿರಋಣಿ. ಮುಂದಿನ ನಾಗಾರಾಧನೆಯು 13.3.2016 ಭಾನುವಾರದಂದು ಜರುಗಲಿದ್ದು, ತಮ್ಮ ಸಹಕಾರ ಇದೇ ರೀತಿ ಮುಂದುವರೆಯಲೆಂದು ಕೋರುತ್ತೇನೆ.

**2015-16ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯು 05.07.2015ರಂದು ನಡೆಯಲಿದೆ. ಆ ದಿನವೇ 75 ವರ್ಷ ತುಂಬಿರುವ ನಮ್ಮ ಸಮುದಾಯದ ಹಿರಿಯರಿಗೆ, 'ಹಿರಿಯ ಚೇತನ' ಸನ್ಮಾನ ಸಮಾರಂಭ ಹಾಗೂ ಸಮುದಾಯದ ಕಿರಿಯರಿಗೆ 'ಪ್ರತಿಭಾ ಪುರಸ್ಕಾರ' ಸಮಾರಂಭವನ್ನು ನಡೆಸಲು ಕಾರ್ಯಕಾರಿ ಸಮಿತಿಯು ತೀರ್ಮಾನಿಸಿದೆ. ತತ್ಸಂಬಂಧದಲ್ಲಿ ತಮ್ಮಲ್ಲಿರುವ ವಿವರಗಳನ್ನು ಸಂಘದ ಕಾರ್ಯದರ್ಶಿಗಳಿಗೆ ಅಥವಾ ಕಾರ್ಯಕಾರಿ ಸಮಿತಿ ಸದಸ್ಯರಿಗೆ ತಲುಪಿಸಲು ಕೋರಿದೆ.**

ಸದಸ್ಯರ ಕೋರಿಕೆಯಂತೆ ಬೆಂಗಳೂರು ನಗರದ ಯಾವುದೇ ಭಾಗದಲ್ಲಿ ಸಂಘದ ಕಛೇರಿಗಾಗಿ ಸ್ಥಳಾವಕಾಶಕ್ಕಾಗಿ ಪ್ರಯತ್ನಿಸುತ್ತಿದ್ದೇವೆ. ತಮ್ಮ ಸಲಹೆಗಳೇನಾದರೂ ಇದ್ದರೆ ತಿಳಿಸಬೇಕಾಗಿ ಕೋರಿಕೆ.

'ಬೃಹಚ್ಚರಣ' ಪತ್ರಿಕೆಯ ಪ್ರಾಯೋಜಕರಿಗೆ ಸ್ವಾಗತ.

ಸಂಘದ ವಾರ್ಷಿಕ ವೆಚ್ಚಕ್ಕಾಗಿ 250/- ರೂ.ಗಳನ್ನು ನೀಡಲು ಕೋರಿಕೆ.



ತಮ್ಮವ,

■ ಎಸ್. ಸೋಮಸುಂದರ



ನಾಗಾರಾಧನೆಯ ಶ್ರೀ ಸುಬ್ರಹ್ಮಣ್ಯ ಉತ್ಸವ ಮೂರ್ತಿ

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

| | |
|---|---|
| ಅಧ್ಯಕ್ಷರು : | **ಎಸ್. ಸೋಮಸುಂದರ, 9900113298** |
| ಉಪಾಧ್ಯಕ್ಷರು : | **ಕೆ.ಬಿ. ಮುರಳಿ, 9448044164** |
| | **ಕೆ. ಮಂಜುನಾರಾಯಣ್, 9886114279** |
| ಕಾರ್ಯದರ್ಶಿ : | **ವಿ.ಎಸ್. ಮಣಿ, 9845055582** |
| ಸಹಕಾರ್ಯದರ್ಶಿ : | **ವಿ. ಅರುಣ, 9880166001** |
| ಖಜಾಂಚಿ : | **ಎಸ್. ಸತ್ಯನಾರಾಯಣ, 9980945699** |
| ಲೆಕ್ಕಪರಿಶೋಧಕರು : | **ಎಚ್.ಕೆ. ಶಶಿಧರ್, 9845173766** |

ಸದಸ್ಯರು : **ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಸಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಆರ್. ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್, ಬಿ. ಸುಬ್ರಹ್ಮಣ್ಯಂ**

## ನಾಗಾರಾಧನೆ 2015




ಮಾನ್ಯರೇ,

ಆನೇಕಲ್ಲು ತಾಲೂಕು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ಬೃಹಚ್ಚರಣ ಸಂಘದ ವತಿಯಿಂದ ದಿನಾಂಕ: 23.2.2015 ಸೋಮವಾರ ನಾಗಾರಾಧನಾ ಧಾರ್ಮಿಕ ಕಾರ್ಯಕ್ರಮ ಹಿಂದಿನ ವರ್ಷಗಳಂತೆ. ಕ್ಷೇತ್ರದ ಆಗಮಿಕ ವೇ॥ ಬ್ರ॥ ಶ್ರೀ ನಂಜುಂಡ ದೀಕ್ಷಿತರ ನೇತೃತ್ವದಲ್ಲಿ ನೆರವೇರಿತು. ಆಗಮಿಸಿದ ಬಂಧುಗಳು ಕುಟುಂಬದ ಸದಸ್ಯರೊಂದಿಗೆ ನಾಗಪ್ಪ ಶಿಲಾದೇವರುಗಳಿಗೆ ಹಾಲು–ತುಪ್ಪ ಪೂಜಾ ಸಾಮಗ್ರಿಗಳೊಂದಿಗೆ ತನಿ ಎರೆದು ಪೂಜಿಸಿ, ಬ್ರಾಹ್ಮಣ ವಟುಗಳನ್ನು ಆರಾಧಿಸಿದರು.

ಸುಬ್ರಹ್ಮಣ್ಯ ಸ್ವಾಮಿ ಉತ್ಸವವು ದೇವಸ್ಥಾನದಿಂದ ನಾಗರಕಟ್ಟೆಗೆ ವೇದಘೋಷ, ಮಂಗಳವಾದ್ಯ ಸಮೇತ ಆಗಮಿಸುತ್ತಿದ್ದಂತೆ ವೇ॥ ಬ್ರ॥ ಶ್ರೀ ಬದರಿನಾರಾಯಣರವರಿಂದ ಶಾಶ್ವತ ಅನ್ನಸಂತರ್ಪಣಾ ನಿಧಿಗೆ ದಾನ ನೀಡಿರುವವರ ಹೆಸರಿನಲ್ಲಿ ಸಂಕಲ್ಪ ಮಾಡಿಸಲಾಯಿತು. ಆ ಸಮಯದಲ್ಲಿ ಕೃಷ್ಣರಾಜಪುರ ಹರಿದಾಸ ಮಹಿಳಾ ಸಂಘದ ಸದಸ್ಯರು ದೇವರನಾಮಗಳನ್ನು ಹಾಡಿದರು.

ದಿ॥ ಕೃಷ್ಣಮೂರ್ತಿ ಕುಟುಂಬದವರಿಂದ ಕೋಸಂಬರಿ, ಪಾನಕ, ಮಜ್ಜಿಗೆಯ ವಿತರಣೆಯಾಗಿ ಸಂಘದ ವತಿಯಿಂದ ಪ್ರಸಾದ ಭೋಜನ ಏರ್ಪಡಿಸಲಾಯಿತು. ಈ ನಾಗಾರಾಧನೆಯ ಸಂದರ್ಭದಲ್ಲಿ ಸದಸ್ಯರಿಂದ ಸುಮಾರು 1,50,000/–ಗಳು ಸಂದಾಯವಾಗಿದೆ. ಸಂಘದ ಮೇಲೆ ತಾವು ಇಟ್ಟಿರುವ ವಿಶ್ವಾಸಕ್ಕೆ ಸಂಘ ಚಿರಋಣಿಯಾಗಿದೆ. ಮುಂದಿನ ನಾಗಾರಾಧನೆಯ ದಿನಾಂಕ 13.3.2016 ಭಾನುವಾರ.



## ನಾಗವಾರಪಾಳ್ಯದ ಶ್ರೀಕಂಠಯ್ಯನವರು

ನಮ್ಮ ಸಮುದಾಯದ ಮಹನೀಯರಲ್ಲಿ ಒಬ್ಬರಾದ ದಿ॥ ಶ್ರೀಕಂಠಯ್ಯನವರು ಕಾಚರಕನಹಳ್ಳಿ ಕುಟುಂಬಕ್ಕೆ ಸೇರಿದವರು. ಶ್ಯಾನುಭೋಗ ನಂಜುಂಡಯ್ಯ, ಗುಂಜೂರು ಲಕ್ಷಮ್ಮ ದಂಪತಿಗಳಿಗೆ 1905ರಲ್ಲಿ ಜನಿಸಿದರು.

ಶ್ರೀಕಂಠಯ್ಯನವರ ತಾತ–ರಂಗಣ್ಣ, ಅಜ್ಜಿ–ವೆಂಕಟಮ್ಮ ನವರು ಬಿನ್ನಮಂಗಲದ ನಿವಾಸಿಗಳಾಗಿದ್ದು, ಪ್ಲೇಗ್ ಬಂದ ಕಾರಣ, ನಾಗವಾರಪಾಳ್ಯಕ್ಕೆ ಬಂದು ನೆಲೆಸಿದರು. ರಂಗಣ್ಣ ನವರು 11 ಗ್ರಾಮಗಳ ಶ್ಯಾನುಭೋಗರಾಗಿದ್ದರು. ಶ್ರೀಕಂಠಯ್ಯನವರು, ಅಣ್ಣ ಸುಬ್ರಾಯಪ್ಪನವರ ಅಕಾಲಿಕ ಅಗಲಿಕೆಯಿಂದ ತಮ್ಮ ಮಕ್ಕಳೊಂದಿಗೆ ಅಣ್ಣನ ಮಕ್ಕಳನ್ನೂ ಭೇದ ಭಾವವಿಲ್ಲದೆ ಬೆಳೆಸಿದರು.

ಶ್ರೀಯುತರು ಅನೇಕ ಜನೋಪಕಾರಿ ಕೆಲಸಗಳಲ್ಲಿ ಸಕ್ರಿಯರಾಗಿದ್ದರು. ನಾಗವಾರ ಪಾಳ್ಯದಲ್ಲಿ ದೇವಸ್ಥಾನ ಮತ್ತು ಅಶ್ವತ್ಥಕಟ್ಟೆಗಳನ್ನು ಕಟ್ಟಿಸಿದ್ದಲ್ಲದೇ ಸರ್ಕಾರಿ ಶಾಲೆ ಸ್ಥಾಪನೆಗೆ ಸ್ವಂತ ಜಮೀನನ್ನು ನೀಡಿದ್ದರು. ವಿನೋಬಾ ಭಾವೆಯವರ ಭೂದಾನ ಚಳುವಳಿಯ ಸಮಯದಲ್ಲಿ ತಮ್ಮ ಜಮೀನನ್ನು ದಾನ ಮಾಡಿದ್ದರು. ಶ್ಯಾನುಭೋಗಿಕೆಯ ವೃತ್ತಿಯಲ್ಲಿ ನಿರತರಾಗಿದ್ದುದರ ಜೊತೆಗೆ ಆಗಿನ ಎಚ್.ಎ.ಎಲ್. ಸಂಸ್ಥೆಯ ಒಳಚರಂಡಿ ಮಂಡಲಿಯ ಸದಸ್ಯರಾಗಿದ್ದರು. ಹಲಸೂರಿನ ಸೋಮೇಶ್ವರ ದೇವಸ್ಥಾನದ ರಥೋತ್ಸವ ಹಾಗೂ ಪಲ್ಲಕ್ಕಿ ಉತ್ಸವದ ಸಂದರ್ಭದಲ್ಲಿ ತಮ್ಮ ಪೂರ್ವಿಕರ ಕಾಲದಿಂದ ನಡೆದುಕೊಂಡು ಬಂದಿದ್ದ ಅರವಟ್ಟಿಗೆಯೊಂದಿಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸುತ್ತಿದ್ದರು. ಹಲಸೂರಿನಲ್ಲಿ ಇರುವ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಗೌರವ ಸದಸ್ಯರಾಗಿ ತೊಡಗಿಸಿಕೊಂಡದ್ದಲ್ಲದೆ ಆ ಮಠಕ್ಕೆ ಧನ ಸಹಾಯವನ್ನು ನೀಡಿದ್ದರು. ನಮ್ಮ ಸಮುದಾಯದ ಅಮ್ಮಣ್ಣಮ್ಮ ವಿದ್ಯಾರ್ಥಿ ನಿಲಯದ ಖಜಾಂಚಿಯಾಗಿ ಕೆಲಕಾಲ ಸೇವೆ ಸಲ್ಲಿಸಿದ್ದರು. ಶ್ರೀಯುತರು ಮೈಸೂರು ಮಂಜಪುತ್ತೂರು ದ್ರಾವಿಡ ಬೃಹಚ್ಚರಣ ಸಂಘದ ಸಂಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದರು.

ಶ್ರೀಯುತರು ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದ ಭಕ್ತರಾಗಿದ್ದು, ಬೃಹಚ್ಚರಣ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ನಮ್ಮ ಸಮುದಾಯದ ಯುವ ಪೀಳಿಗೆಗೆ ಪ್ರೋತ್ಸಾಹ ನೀಡುತ್ತಿದ್ದರು.

ಸರಳಜೀವಿಯೂ, ಮೃದುಭಾಷಿಯೂ ಆಗಿದ್ದ ಶ್ರೀ ಶ್ರೀಕಂಠಯ್ಯನವರು 1991ರಲ್ಲಿ ನಮ್ಮನ್ನು ಅಗಲಿದರು.

–ಸಂ

# ಧಾರ್ಮಿಕ ಚಿಂತನೆ – "ರಾಮಾಯಣ"

ಎಲ್ಲರಿಗೂ 'ಮನ್ಮಥ ನಾಮ ಸಂವತ್ಸರ'ದ ಹಾಗೂ 'ಶ್ರೀರಾಮನವಮಿ'ಯ ಶುಭಾಶಯಗಳು. 'ಮನ್ಮಥ' ಎಂಬಲ್ಲಿ ಮನ ಮತ್ತು ಮಥ ಎಂಬ ಶಬ್ದಗಳಿವೆ. ಮನಸ್ಸುಳ್ಳದ್ದರಿಂದ ನಾವು ಮಾನವರೆನಿಸಿದ್ದೇವೆ. ಇಂತಹ ಮನಸ್ಸನ್ನು ಮಥನ ಮಾಡಲು ಈ ಸಂವತ್ಸರವನ್ನು ನಾಂದಿ ಮಾಡಿಕೊಳ್ಳೋಣ. ನಿದ್ರಾ, ಆಹಾರ, ಭಯ ಮತ್ತು ಮೈಥುನ ಎಲ್ಲಾ ಜೀವಿಗಳಿಗೂ ಸಾಮಾನ್ಯವಾಗಿದೆ. ಆದರೆ ಇದರೊಂದಿಗೆ ವಾಕ್ ಮತ್ತು ವಿವೇಕ ಹೊಂದಿರುವ ಮನುಷ್ಯ ಶ್ರೇಷ್ಠನೆನಿಸಿಕೊಳ್ಳುತ್ತಾನೆ. ತನಗಿರುವ ಈ ಸವಲತ್ತನ್ನು ಚಿಂತನೆಗಾಗಿ ಬಳಸಿಕೊಳ್ಳಬೇಕು.

ಆದಿಕವಿಗಳಾದ ವಾಲ್ಮೀಕಿಗಳಿಂದ ರಚಿತವಾದ ಮತ್ತು ಮಹಾಕಾವ್ಯ ಎನಿಸಿದ 'ಶ್ರೀ ಮದ್‌ರಾಮಾಯಣ'ದ ಕಥೆಗಳನ್ನು ನಾವೆಲ್ಲರೂ ಚಿಕ್ಕಂದಿನಿಂದ ಹಿರಿಯರಿಂದ ಕೇಳುತ್ತಲೇ ಬಂದಿದ್ದೇವೆ. ಇದರಲ್ಲಿ ರೂಪಿತವಾಗಿರುವ ಪಾತ್ರಗಳನ್ನು, ಸನ್ನಿವೇಶಗಳನ್ನು ಗಮನಿಸಿದಾಗ, ಎಲ್ಲದರಲ್ಲೂ ಒಳ ಅರ್ಥ ಇರುವುದು ತಿಳಿಯುತ್ತದೆ. ಇಂತಹ ಕೆಲವು ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

'ರಾಮಾಯಣ' ಎಂದರೆ ಆದರ್ಶ ಮಾನವನ ಜೀವನ ಚಿತ್ರಣ ಅಥವಾ ರಾಮನ ಪಯಣ. ಇದರರ್ಥ ಪ್ರತೀ ಮಾನವ ಜೀವಿಯು ತನಗೆ ತಿಳಿದಿರುವುದರಿಂದ, ತನಗೆ ತಿಳಿಯದೇ ಇರುವತ್ತ ಪ್ರಯಾಣ ಮಾಡಿ ಅದನ್ನು ತಿಳಿದುಕೊಳ್ಳುವುದು (from known to unknown) ಇದು ಅವನ ಬದುಕಿನ ಗುರಿಯಾಗಿರಬೇಕು. ಅಯೋಧ್ಯೆ ಪಟ್ಟಣವೇ ನಮ್ಮ ಈ ಶರೀರ. ಸೂರ್ಯ ವಂಶದ ಸಂಕೇತ ಪ್ರಕಾಶ ಮತ್ತು ಜ್ಞಾನ ದಶರಥ ಮಹಾರಾಜನೇ ನಮ್ಮ 10 ಇಂದ್ರಿಯಗಳು (5 ಜ್ಞಾನೇಂದ್ರಿಯ, 5 ಕರ್ಮೇಂದ್ರಿಯ) ಪತ್ನಿಯರಾದವರು ಕೌಶಲ್ಯ, ಸುಮಿತ್ರ, ಕೈಕೇಯಿ. ಇವರು ಸತ್ತ್ವ, ರಜೋ, ತಮೋ ಗುಣಗಳ ಪ್ರತೀಕ. ಸತ್ತ್ವಗುಣದ ಲಕ್ಷಣವಾದ ಜ್ಞಾನದಿಂದ ಜನಿಸಿದವನು ಪ್ರಭು ಶ್ರೀರಾಮಚಂದ್ರ. ಈತ ಆನಂದದ ಸಂಕೇತ. ರಜೋಗುಣದ ಲಕ್ಷಣವಾದ ಕರ್ಮದಿಂದ ಜನಿಸಿದ ಲಕ್ಷ್ಮಣ ಮತ್ತು ಶತೃಘ್ನ, ವೈರಾಗ್ಯದ ಸಂಕೇತ. ತಮೋಗುಣದ ಲಕ್ಷಣವಾದ ಪ್ರಮಾದದಿಂದ ಜನಿಸಿದನಾದರೂ, ಭರತ, ವಿವೇಕದ ಸಂಕೇತ.

ಮುಂದೆ ಶ್ರೀ ರಾಮಲಕ್ಷ್ಮಣರು ಅರಣ್ಯದಲ್ಲಿ ಆಸುರೀ ಸ್ವಭಾವವುಳ್ಳ ತಾಟಕಿ, ಕಬಂಧನನ್ನು ಸಂಹರಿಸಿದರು. ಅರಣ್ಯ ಎಂಬಲ್ಲಿ ಅ+ರಣ್ಯ ಸೇರಿದೆ. ರಣ್ಯ ಎಂದರೆ ಶಬ್ದ, ಅ ಎಂದರೆ ಇಲ್ಲದುದು ಶಬ್ದ ಇಲ್ಲದ ಸ್ಥಳವೇ ನಮ್ಮ ಅಂತಃಕರಣ. ಅಲ್ಲಿ ಬರುವ ಆಸುರೀ ಸ್ವಭಾವವನ್ನು ನಾವೇ ಗಮನಿಸಿ ದಮನ ಮಾಡಬೇಕು.

ಗೌತಮ ಮಹರ್ಷಿಗಳ ಪತ್ನಿ ಅಹಲ್ಯೆಯು ಶ್ರೀರಾಮನ ಪಾದಸ್ಪರ್ಶದಿಂದ ಶಾಪ ವಿಮೋಚಿತಳಾದಳು. ಪ್ರಪಂಚದ ವಿಷಯಗಳ ಕಡೆ ಗಮನ ಕೊಡದೆ ಆತ್ಮಚಿಂತನೆಯಲ್ಲಿದ್ದುದರಿಂದ ಜಗತ್ತಿಗೆ ಜಡವಾಗಿದ್ದಳು. ಆತ್ಮ ಚಿಂತನೆಯ ಫಲ ಮೋಕ್ಷವಾದ್ದರಿಂದ ಅವಳಿಗೆ ಶ್ರೀರಾಮನ ದರ್ಶನವಾಯಿತು. ಶ್ರೀರಾಮನು ನಡೆದಂತೆ ನಡೆಯಬೇಕು. ಆದ್ದರಿಂದ ಅವನ ಪಾದದ ನಡೆ, ಚರಣಗಳನ್ನು ಎಲ್ಲರೂ ಅನುಸರಿಸಬೇಕು.

ಮಿಥಿಲಾ ದೊರೆ ರಾಜರ್ಷಿ ಜನಕನಿಗೆ ಅವನಿಯಿಂದ ದೊರೆತವಳು ಸೀತಾದೇವಿ. ಸಹನೆ, ತಾಳ್ಮೆಯುಳ್ಳ ಭೂದೇವಿಯ ಸುತೆ ಸೀತಾದೇವಿ ಶಾಂತಿಯ ಸಂಕೇತ. ನಂತರ ಆನಂದರಾಮ ಮತ್ತು ಶಾಂತಿ ಸೀತಾದೇವಿಯ ಲಗ್ನವಾಯಿತು.

ನಂತರದಲ್ಲಿ, ಶ್ರೀರಾಮಚಂದ್ರ ಪ್ರಭುವಿಗೆ ಪಟ್ಟಾಭಿಷೇಕದ ತಯಾರಿ ನಡೆಯಿತು. ಮಂಥರಾ ಎಂಬ ದಾಸಿ ಮಾತನ್ನು ಕೇಳಿಕೊಂಡು ಕಿರಿಪತ್ನಿ ಕೈಕೇಯಿ, ದಶರಥ ಮಹಾರಾಜ ನೀಡಿದ ಎರಡು ವರಗಳನ್ನು ಉಪಯೋಗಿಸಲು ಪ್ರೇರಿತಳಾದಳು. ಸದುದ್ದೇಶ ಇಲ್ಲದಿದ್ದಾಗ ವರವೂ ಶಾಪವಾಗಿ ಪರಿಣಮಿಸುತ್ತದೆ. ಶ್ರೀರಾಮನನ್ನು 14 ವರ್ಷ ಅರಣ್ಯಕ್ಕೆ ಕಳುಹಿಸುವುದು ಮತ್ತು ಭರತನಿಗೆ ಪಟ್ಟಾಭಿಷೇಕ ಆಗಬೇಕೆಂದು ಕೇಳಿದಳು.

ಆನಂದರೂಪಿಯಾದ ಶ್ರೀರಾಮ, ಯಾವ ವಿಷಯಗಳಿಗೂ ಅವಲಂಬಿತನಾಗಿರದಿದ್ದರಿಂದ, ಸಂತೋಷದಿಂದಲೇ ಅರಣ್ಯದತ್ತ ಕ್ರಮಿಸಲು ಸನ್ನದ್ಧನಾದನು. ಇವನನ್ನು ಹಿಂಬಾಲಿಸಿ ಶಾಂತಿ ಮತ್ತು ವೈರಾಗ್ಯ ಎಂದರೆ ಸೀತಾಮಾತೆ ಮತ್ತು ಲಕ್ಷ್ಮಣ ಉಪಕ್ರಮಿಸಿದರು. ಪುತ್ರ ವ್ಯಾಮೋಹದಿಂದ ಬಂಧಿತನಾಗಿದ್ದ ದಶರಥ ಮಹಾರಾಜ ಆನಂದ, ಶಾಂತಿ ಇಲ್ಲದೆ ಹೋದನು. ದಶರಥ ಪುತ್ರ ದಾಶರಥಿ, ಶರೀರ ಎಂಬ ರಥದಿಂದ ಹೊರಟ ತಕ್ಷಣ ಮಹಾರಾಜ ಅಸು ನೀಗಿದನು. ಶರೀರದ ಮೇಲೆ ಅವಲಂಬಿತನಾದವನಿಗೆ ಶೋಕ, ಮೋಹ, ಭಯ ನಿಶ್ಚಿತ. ದೇಹಾಭಿಮಾನಿಗೆ ದುಃಖ ಖಚಿತ.

ಆತ್ಮವು ಶಬ್ದವಿಲ್ಲದ ಸ್ಥಳದಲ್ಲಿ ಆನಂದವಾಗಿ, ಶಾಂತಿ ಮತ್ತು ವೈರಾಗ್ಯದೊಂದಿಗೆ ಇರುವಾಗ ಅಲ್ಲಿಗೆ ರಾವಣನೆಂಬ ಅಸುರನ ಆಗಮನ. ರಾವಣನು ಮೋಹದ ಸಂಕೇತ. ಮೋಹವು ಅಜ್ಞಾನವೆಂಬ ಅಂಧಕಾರದಲ್ಲಿದ್ದಾಗ ಏನಾಗುತ್ತದೆ ಎಂದು ಹೇಳಲಾಗುವುದಿಲ್ಲ. ರಾವಣನು ಸೀತಾಮಾತೆಯನ್ನು ಅಪಹರಿಸಿದನು. ಆಗ ಆತ್ಮರಾಮನು ಆನಂದ ಇಲ್ಲದೆ ಶಾಂತಿಗಾಗಿ ಹುಡುಕಾಡಿದನು. ರಾವಣನಿಗೂ ಮೋಹ ಆವರಿಸಿದಾಗ ಶಾಂತಿ ಇಲ್ಲದಂತಾಯಿತು. ಕಡೆಗೂ ಸಿಗುವುದೇ ಇಲ್ಲದಂತಾಯಿತು.

ಕಿಷ್ಕಿಂದೆ ಎಂದರೆ ಇಕ್ಕಟ್ಟಾದುದು. ಸೀತಾದೇವಿ ಕಾಣೆಯಾದಾಗ ಶ್ರೀರಾಮನಿಗೆ ಹೇಗೆ, ಎಲ್ಲಿ ಅವಳನ್ನು ಕಾಣುವುದು ಎಂಬಂತಹ ಇಕ್ಕಟ್ಟಾದ ಪರಿಸ್ಥಿತಿಯಲ್ಲಿ ಹನುಮಂತನ ಆಗಮನ. ವಾಯು ಪ್ರವೇಶಿಸಲು ಸಾಧ್ಯವಿಲ್ಲ ಎಂಬಂತಹ ಸ್ಥಳ ಯಾವುದೂ ಇಲ್ಲ. ಹಾಗಿರುವಾಗ ಅಲ್ಲಿಗೆ ವಾಯುಪುತ್ರನಾದ ಹನುಮಂತ ಬರುತ್ತಾನೆ. ಆತ ಪ್ರೇಮ, ಭಕ್ತಿಯ ಸಂಕೇತ. ಕಪಿರೂಪದಲ್ಲಿರುವವನು ಹನುಮಂತ. ಮನಸ್ಸು ಸದಾ ಕಪಿರೂಪದಲ್ಲೇ ಅಂದರೆ ಸಂಕಲ್ಪ, ವಿಕಲ್ಪಗಳಲ್ಲೇ ಇದ್ದು ಚಂಚಲವಾಗಿರುತ್ತದೆ. ಇಂತಹ ಮನಸ್ಸು ಕೂಡ ಗುರಿ ನಿಶ್ಚಿತವಾದಾಗ ಅತ್ತಲೇ ಮಾರ್ಗ ಇರುವುದು ಎಂಬುದು ಕಾಣುತ್ತದೆ. ಹನುಮ, ಸುಗ್ರೀವನ ಸಹಾಯದಿಂದ ಶ್ರೀರಾಮ ಸೀತಾನ್ವೇಷಣೆಗೆ ಪ್ರಾರಂಭಿಸುತ್ತಾನೆ. ಸುಗ್ರೀವನನ್ನು ಸ್ನೇಹಿತನಾಗಿ ಸ್ವೀಕರಿಸಿದ ಶ್ರೀರಾಮ ಅವನಿಗೆ ಸಹಾಯ ರೂಪದಲ್ಲಿ ವಾಲಿಯನ್ನು ಸಂಹರಿಸಿದ. ಶ್ರೀರಾಮನು ಕಾಣದಂತೆ ಮರದ ಹಿಂದೆ ನಿಂತು ಬಾಣಬಿಟ್ಟು ವಾಲಿ ಸಂಹಾರ ಮಾಡಿದ. ಎಂದರೆ ಕಾಣದ ಜಾಗ, ನಮ್ಮ ಅಂತಃಕರಣವೇ ಸರಿ. ಅಲ್ಲಿ ನಿಂತು ವಾಲಿಯ ದೋಷವನ್ನೇ ಅವನಿಗೆ ಗುರಿಯಾಗಿಸಿದನು.

ಲಂಕೆಯ ಅಶೋಕವನದಲ್ಲಿ ಸೀತೆಯನ್ನು ರಾವಣ ಇಟ್ಟಿದ್ದನು. ಅಶೋಕವನ ಎಂದರೆ ಶೋಕ ಇಲ್ಲದ ಸ್ಥಿತಿಯಲ್ಲಿ ಸೀತೆಗೆ ಶ್ರೀರಾಮನ ಧ್ಯಾನವೇ ಭಯವೂ ಇಲ್ಲದಂತೆ ಮಾಡಿತ್ತು. ಹನುಮಂತ ಸೀತೆಯನ್ನು ಹುಡುಕುತ್ತಾ ಭವಸಾಗರವನ್ನು ದಾಟಿ ಲಂಕೆಗೆ ಬಂದನು. ಸೀತಾಮಾತೆಯನ್ನು ಕಂಡು ಸಂತೋಷದಿಂದ ತೆರಳುತ್ತಿದ್ದಾಗ ಅಲ್ಲಿನವರಿಂದ ಸೆರೆ ಸಿಕ್ಕನು. ಆದರೆ, ಮೋಹಕ್ಕಿಂತ ಎತ್ತರವಾದ ನಿರ್ವ್ಯಾಜಪ್ರೇಮ, ಭಕ್ತಿಯು ಮೇಲೆ ಕುಳಿತಿತು.

ಸಾಗರ ದಾಟಲು ಕಪಿಸೇನೆಯೊಂದಿಗೆ ಶ್ರೀರಾಮಲಕ್ಷ್ಮಣರು ಸನ್ನದ್ಧರಾದರು. ಸೇತುವೆ ನಿರ್ಮಿಸಲು ಪ್ರತಿ ಕಲ್ಲಿನ ಮೇಲೂ ಶ್ರೀರಾಮನಾಮ ಬರೆದು ತೇಲಿಬಿಟ್ಟರು. ಕಲ್ಲು ಎಂದರೆ ಅಜ್ಞಾನವೆಂಬ ಘನ ವಸ್ತುವೂ ಜ್ಞಾನ ಎಂಬ ಶ್ರೀರಾಮನಾಮದಿಂದ ಹಗುರವಾಗಿ ತೇಲುತ್ತದೆ.

ಲಂಕೆಯ ಅರಸ ರಾವಣ ಮತ್ತು ಅವನ ಸಹೋದರರಾದ ಕುಂಭಕರ್ಣ ಮತ್ತು ವಿಭೀಷಣರೂ ಕ್ರಮವಾಗಿ ರಜೋ, ತಮ ಮತ್ತು ಸತ್ವಗುಣಗಳನ್ನು ಹೊಂದಿದವರು. ವಿಭೀಷಣನು ಸತ್ತ್ವಕ್ಕಿಂತಲೂ ಉತ್ತಮವಾದ ವಿಶುದ್ಧನಾಗಿ ಶ್ರೀರಾಮನತ್ತ ಹೊರಟನು. ರಜೋ, ತಮಗಳನ್ನಲ್ಲದೆ ಉಳಿದ ಅಸುರೀಭಾವ ಹೊಂದಿದವರನ್ನು ಶ್ರೀರಾಮ ಸಂಹರಿಸಿದನು ಮತ್ತು ಶಾಂತಿಯ ನೆಲೆ ಕಂಡನು. ಸೀತೆಯೊಂದಿಗೆ ಹಿಂತಿರುಗಿದನು. ನಂತರ ಶ್ರೀರಾಮನ ಪಟ್ಟಾಭಿಷೇಕವು ನಡೆಯಿತು.



■ ಲಲಿತಾ ರಮೇಶ್

# 2015ರ ನಾಗಾರಾಧನೆ

















# 2015ರ ನಾಗಾರಾಧನೆ


















# !!!! ನಾನೂ, ನನ್ನ ಪಪ್ಪಿ !!!



ಪ್ರತಿದಿನ ನಾನು ಸ್ಕೂಲಿಂದ ಬಂದಮೇಲೆ ನಿನ್ ಜೊತೆ ಒಂದು ರೌಂಡ್ ಆಚೆ ಹೋಗಿಬಂದ್ರೇನೇ ನಂಗೆ ಸಮಾಧಾನ.

ನನ್ ಸಂತೋಷ, ಬೇಜಾರು, ಭಯ ಅದನ್ನೆಲ್ಲಾ ಹೇಳ್ಕೊಳ್ಳೋಕೆ ನಿನ್ನನ್ನು ಬಿಟ್ರೆ ನನಗೆ ಬೇರೆ ಯಾರೂ ಇಲ್ಲ. ನೀನು ಒಂದೊಂದ್ ಸಲ 'ಯಾಕೆ ಒಂಥರಾ ಇದ್ದೀಯಾ?' ಅಂತ ನನ್ನನ್ನು ಕೇಳಿದ್ದುಂಟು ಅಲ್ವಾ? ನಿಜ, ನಾನು ನಿಂಗೆ ಏನೇನೋ ಹೇಳ್ಬೇಕು ಅನ್ಸುತ್ತೆ ನಾನು ಒಳ್ಳೆ ಮನೇಲಿ ಇದ್ದೀನಿ, ಅಪ್ಪ ಅಮ್ಮ ಮುದ್ದು ಮಾಡ್ತಾರೆ, ಮನೇಲಿ ಎಲ್ಲಾನೂ ಇವೆ, ನಂಗೆ ಇಷ್ಟ ಆಗಿದ್ದನ್ನೆಲ್ಲಾ ತಂದುಕೊಡ್ತಾರ ಅಂತ, ಅಲ್ವಾ? ಆದ್ರೆ ನೋಡು, ನನ್ನ ಜೊತೆ ಆಡೋಕೆ, ಮಾತಾಡೋಕೆ ದೊಡ್ಡೋರಿಗೆ ಯಾರಿಗೂ ಇಷ್ಟಾನೇ ಇಲ್ಲ! ನಮ್ಮಪ್ಪ ಯಾವಾಗ್ಲೂ ಅವರ ಕೆಲಸದ ಬಗ್ಗೆನೇ ಮಾತಾಡ್ತಾ ಇರ್ತಾರೆ, ಯೋಚ್ನೆ ಮಾಡ್ತಾ ಇರ್ತಾರೆ. ಎಷ್ಟೋ ಸಲ ನೋಡಿದ್ದೀನಿ, ಅಪ್ಪ ಯಾರ ಹತ್ರಾನೋ ಮಾತಾಡೋವಾಗ ಸುಳ್ಳು ಹೇಳ್ತಾ ಇರ್ತಾರೆ!

ಇನ್ನು ಅಮ್ಮನೋ, ಯಾವಾಗ್ಲೂ ಯಾರೋ ಫ್ರೆಂಡ್ಸ್ ಆಂಟಿಗಳ ಜೊತೆ ಹರಟೆ ಹೊಡೀತಾ ಇರ್ತಾರೆ. ಆಗ ನಾನೇನಾದ್ರೂ ಅವರನ್ನ ಮಾತಾಡಿಸಿದ್ರೆ, ನನ್ನನ್ನು ನನ್ನ ಕೋಣೆಗೆ ದಬ್ಬಿ, ಓದಿಕೊ ಹೋಗು ಹೋಂವರ್ಕ ಮಾಡು! ಅಂತಾರೆ. ಹೊರಗೆ ಹೋಗಬೇಡ, ಚಳಿ, ಥಂಡಿ, ಗಾಳಿ, ಕೆಮ್ಮು ಬರುತ್ತೆ! ಅಂತಾರೆ, ಮತ್ತೆ ಕೆಲವೊಮ್ಮೆ ಬಿಸಿಲು, ಧೂಳು, ಜ್ವರ ಬರುತ್ತೆ! ಅಂತಾರೆ.

ಆಗೆಲ್ಲಾ ನಾನು ನಿನ್ನ ಬಗ್ಗೆ ಯೋಚಿಸ್ತೀನಿ....

ನಿನಗೆ ಬೆಚ್ಚಗಿರೋ ಒಳ್ಳೆ ಕೋಣೆ ಇಲ್ಲ. ಮನೆಯ ಬಾಗಿಲ ಆಚೆ ಸಣ್ಣದೊಂದು ಜಾಗ, ಅಷ್ಟೆ! ನಿಂಗೆ ಹಳೇದು ಒಂದು ಗೋಣೀಚೀಲಾನೇ ಹಾಸಿಗೆ, ನೆಗ್ಗಿರೋ ಹಳೆಯ ಪಾತ್ರೆಲಿ ನಿಂಗೆ ಊಟ, ಇನ್ನು ಆ ನಿನ್ನ ಊಟವೋ, ನಾವು ತಿಂದು ಉಳಿದದ್ದನ್ನೆಲ್ಲಾ ಒಟ್ಟುಮಾಡಿ ನಿನ್ನ ಪಾತ್ರೆಯಲ್ಲಿ ಸುರೀತಾರೆ. ನೀನು ಆಸೆ ಪಡೊ ತಿಂಡಿ ನಿಂಗೆ ಯಾವಾತ್ತೂ ಸಿಕ್ಕಿಲ್ಲ! ಇನ್ನು ಐಸ್ಕ್ರೀಮ್, ಕೇಕ್, ಚಾಕ್ಲೇಟ್ ನೀನು ತಿಂದೇ ಇಲ್ಲ. ನೀನು ಅದು ಯಾವಾಗ ನಿದ್ರೆ ಮಾಡುತ್ತೀಯೋ ಏನೊ! ಯಾವಾಗ್ಲೂ ಮನೆ ಕಾಯೋದೇ ನಿನ್ ಕೆಲಸ. ಆದರೂ, ನಿಂಗೆ ನಮ್ಮನ್ನ ಕಂಡ್ರೆ ಇಷ್ಟ! ಬಾಲ ಅಲ್ಲಾಡಿಸುತ್ತಾ ಮನೆಯ ಎಲ್ಲರಲ್ಲೂ ಒಂದೇ ರೀತಿಯ ಪ್ರೀತಿ ತೋರಿಸುತ್ತೀಯ. ಚಳಿ, ಮಳೆ, ಗಾಳಿ, ಬಿಸಿಲು ಏನೇ ಇರಲಿ ನಿನಗೆ ಅದೇ ಹಳೇ ಗೋಣಿಚೀಲ, ನಾವು ಉಂಡು ಉಳಿದ ಅದೇ ಊಟ.

ಆದರೆ, ಒಂದು ವಿಷಯದಲ್ಲಿ ನೀನು ತುಂಬಾ ಲಕ್ಕೀ! ನನ್ನಂತೆ ಶಾಲೆಗೆ ಹೋಗುವ ಗೋಜಿಲ್ಲ, ಯೂನಿಫಾರಂ, ಬೂಟು, ಟೈಗಳ ಗೊಡವೆ ನಿನಗಿಲ್ಲ. ಇನ್ನು ಹೋಂವರ್ಕು, ಟೆಸ್ಟು, ಪರೀಕ್ಷೆ ಇವುಗಳ ರಗಳೆ ಇಲ್ಲವೇ ಇಲ್ಲ. ಇದನ್ನು ನೆನಸಿಕೊಂಡಾಗಲೆಲ್ಲಾ, ನೀನು ಎಂತಹ 'ಲಕ್ಕಿ ಗೈ' ಅಂತ ಅನ್ನಿಸುತ್ತೆ.

ಅದ್ಯಾಕೋ ನಮ್ಮಪ್ಪಾ ಯಾವಾಗಲೂ ಇನ್ನೂ ದುಡ್ಡು ಬೇಕು, ಇನ್ನೂ ಒಂದ್ ಮನೆ ಕಟ್ಟಬೇಕು, ಜಾಸ್ತಿ ದುಡ್ಡು ಕೂಡಿಡಬೇಕು ಅಂತ ಅಮ್ಮನ ಹತ್ರ ಹೇಳ್ತಾ ಇರ್ತಾರೆ. ಅಪ್ಪನ ಹತ್ರ ತುಂಬಾ ದುಡ್ಡು ಇದೆ, ಆದ್ರೆ ಯಾಕೆ ಹಾಗೆ ಇನ್ನೂ ಬೇಕು ಅಂತಾರೆ, ಗೊತ್ತಿಲ್ಲ. ಯಾರಾನ ಸ್ವಲ್ಪ ಸಾಲ ಬೇಕಿತ್ತು ಅಂತ ಕೇಳಿದ್ರೆ ಮಾತ್ರ, ದುಡ್ಡೇ ಇಲ್ಲ ಅಂತ ಸುಳ್ಳು ಹೇಳ್ತಾರೆ. ನೀನು ಮಾತ್ರ ಊಟ ಬಿಟ್ರೆ ಬೇರೇ ಏನೂ ಕೇಳೋಲ್ಲ, ನಿನಗೆ ದುಡ್ಡು ಬೇಕು ಅಂತ ಆಸೆನೂ ಇಲ್ಲ, ಕೊಟ್ಟರೆ ಎಣಿಸೋಕೂ ಬರೋಲ್ಲ ಅಲ್ವಾ...? ನೀನೇ ತುಂಬಾ ಲಕ್ಕಿ ಕಣೊ...!!!!


ಹ್ಯಾಟ್ ಸ್ ಆಫ್ ಮೈ ಫ್ರೆಂಡ್ ಪಪ್ಪಿ !!!




■ವಿ.ಎಸ್.ಮಣಿ
98450 55582

## ಚಿಣ್ಣರ ಅಂಗಳ

### ಹತ್ತು ವ್ಯತ್ಯಾಸ ಕಂಡುಹಿಡಿಯಿರಿ





**ಬಣ್ಣ ತುಂಬಿ ಚಂದ ನೀಡಿ**

ಡಿ. ಗೋವಿಂದರಾವ್

[illegible]

ಕಿರು ಕಥೆಗಳು

# ಮರ ಕಡಿಯುವವ

ಒಂದಾನೊಂದು ಕಾಲದಲ್ಲಿ ಒಬ್ಬ ಮರ ಕಡಿಯುವ ವ್ಯಕ್ತಿ ಒಬ್ಬ ದೊಡ್ಡ ಸೌದೆ ವ್ಯಾಪಾರಿಯ ಬಳಿ ಬಂದು ಕೆಲಸ ಕೊಡುವಂತೆ ಕೇಳಿದ. ಕೆಲಸವೂ ಸಿಕ್ಕಿತು. ಒಳ್ಳೇ ಸಂಬಳ, ಕೈ ತುಂಬಾ ಕೆಲಸ, ಕೆಲಸ ಮಾಡುವ ವಾತಾವರಣವೂ ಚೆನ್ನಾಗಿತ್ತು. ಅದಕ್ಕಾಗಿ ಆ ಮರ ಕಡಿಯುವವ ತುಂಬಾ ಹುಮ್ಮಸ್ಸಿನಿಂದ ಕೆಲಸವನ್ನು ಮಾಡಲು ಒಪ್ಪಿಕೊಂಡ.

ಒಂದು ದಿನ ವ್ಯಾಪಾರಿಯು ಮರ ಕಡಿಯುವವನಿಗೆ ಒಂದು ಕೊಡಲಿಯನ್ನು ಕೊಟ್ಟು, ಮರಗಳನ್ನು ಕಡಿಯಬೇಕಾದ ಜಾಗವನ್ನು ತೋರಿಸಿದ. ಮೊದಲನೆಯ ದಿನ, ಮರ ಕಡಿಯುವವನು ಹದಿನೈದು ಮರಗಳನ್ನು ಕಡಿದು ತಂದನು. ವ್ಯಾಪಾರಿಯು ಇವನ ಕೆಲಸವನ್ನು ಮೆಚ್ಚಿ ಅಭಿನಂದಿಸಿ, ಹೀಗೇ ಕೆಲಸವನ್ನು ಮಾಡು ಎಂದ ಈ ಮಾತುಗಳಿಂದ ಮತ್ತಷ್ಟು ಪ್ರೇರಿತನಾಗಿ ಮುಂದಿನ ದಿನ ಕಷ್ಟ ಪಟ್ಟು ಹತ್ತು ಮರಗಳನ್ನು ಕಡಿದು ತಂದನು. ಮೂರನೆಯ ದಿನ ಇನ್ನೂ ಕಷ್ಟ ಪಟ್ಟು ಏಳು ಮರಗಳನ್ನು ಕಡಿದನು. ಹೀಗೇ ದಿನಗಳು ಉರುಳಿದಂತೆ ಅವನು ತರುತ್ತಿದ್ದ ಮರಗಳ ಸಂಖ್ಯೆ ಕಡಿಮೆಯಾಗುತ್ತಿತ್ತು. ಅವನು "ನನ್ನ ಶಕ್ತಿ ಕುಂದುತ್ತಿದೆಯೇ?" ಎಂದು ಆಲೋಚಿಸಿದನು. ಅವನು ವ್ಯಾಪಾರಿಯ ಬಳಿ ಬಂದು "ಒಡೆಯ, ಕ್ಷಮಿಸಿ. ಯಾಕೆ ಈ ರೀತಿ ಆಗ್ತಿದೆ ಅಂತ ನನಗೇನೂ ಗೊತ್ತಾಗ್ತಿಲ್ಲ. ಎಂದನು. ವ್ಯಾಪಾರಿಯು "ನಿನ್ನ ಕೊಡಲಿಯನ್ನು ಯಾವಾಗ ಹರಿತಗೊಳಿಸಿದ್ದು?" ಎಂದಾಗ, ಮರ ಕಡಿಯುವವನು ಹರಿತಗೊಳಿಸುವುದೇ? ನನಗೆ ಸಮಯವೇ ಇರಲಿಲ್ಲ. ನಾನು ಮರಗಳನ್ನು ಕಡಿಯುವುದರಲ್ಲಿ ನಿರತನಾಗಿದ್ದೆ." ಎಂದ. ಇದೇ ರೀತಿ ನಮ್ಮಲ್ಲಿ ಬಹುತೇಕ ಮಂದಿ ನಮ್ಮ ಕೌಶಲ್ಯಗಳನ್ನು ಅಪ್‌ಡೇಟ್ ಮಾಡೋದೇ ಇಲ್ಲ. ನಾವು ಏನು ಕಲಿತಿದ್ದೇವೋ ಅಷ್ಟೇ ಸಾಕು ಎಂದು ಭಾವಿಸುತ್ತೇವೆ. ಆದರೆ ಇಷ್ಟೇ ಸಾಕು ಎನ್ನುವುದಕ್ಕಿಂತ ಇನ್ನೂ ಕಲಿಯಬೇಕು ಎಂಬ ಮನೋಭಾವ ಬೆಳೆಸಿಕೊಂಡರೆ ಚೆನ್ನ ಅಲ್ಲವೇ? ಆದ್ದರಿಂದ ಸಮಯಕ್ಕೆ ತಕ್ಕಂತೆ ನಮ್ಮ ಕೌಶಲ್ಯಗಳನ್ನು ಹರಿತಗೊಳಿಸುತ್ತಿರಬೇಕು. ಅಲ್ಲವೇ?

# ಟೋಪಿವಾಲಾ

ಇದೊಂದು ಹಳೆಯ ಕತೆ ಅಂತ ತಿಳ್ಕೋಬೇಡಿ. ಈ ಹಳೆಯ ಕತೆಗೆ ಹೊಸ ಭಾಗವೊಂದು ಸೇರ್ಪಡೆಯಗಿದೆ. ತಮಾಷೆಯಾಗಿದೆ!

ಒಬ್ಬ ಯುವಕ ಮನೆಯಲ್ಲೇ ಟೋಪಿಗಳನ್ನು ತಯಾರಿಸಿ ಊರಿಂದೂರಿಗೆ ಹೋಗಿ ಅವನ್ನು ಮಾರುತ್ತಿದ್ದ. ಬೆಳಿಗ್ಗೆ ಒಂದೂರಿನಲ್ಲಿದ್ದರೆ, ಮಧ್ಯಾಹ್ನ ಮತ್ತೊಂದೂರು, ಸಂಜೆ ಮಗದೊಂದೂರು. ಒಂದು ಮಧ್ಯಾಹ್ನ ಒಂದೂರಿನಿಂದ ಮತ್ತೊಂದೂರಿಗೆ ನಡೆದು ಹೋಗುತ್ತಿದ್ದ. ತಲೆಯ ಮೇಲೆ ಟೋಪಿಯಿದ್ದರೂ, ಬಿಸಿಲು ಹೆಚ್ಚಾಗಿದ್ದುದರಿಂದ ಸ್ವಲ್ಪ ವಿಶ್ರಾಂತಿ ಪಡೆಯೋಣವೆನಿಸಿತು. ದಾರಿಯಲ್ಲೊಂದು ಮಾವಿನ ಮರ ಕಂಡಿತು. ಟೋಪಿಗಳಿದ್ದ ಚೀಲ ಪಕ್ಕದಲ್ಲಿಟ್ಟುಕೊಂಡು ಮರದ ನೆರಳಲ್ಲಿ ಮಲಗಿಬಿಟ್ಟ. ನಿದ್ದೆಯಿಂದೆದ್ದು ನೋಡಿದರೆ ಚೀಲದಲ್ಲಿ ಒಂದು ಟೋಪಿಯೂ ಇರಲಿಲ್ಲ. ಗಾಬರಿಗೊಂಡು ತಲೆಯೆತ್ತಿ ನೋಡಿದಾಗ ಮರದ ಮೇಲೆ ಹತ್ತಾರು ಕೋತಿಗಳು ಕುಳಿತಿದ್ದವು. ಎಲ್ಲ ಕೋತಿಗಳೂ ತಲೆಗೊಂದೊಂದು ಟೋಪಿಗಳನ್ನು ಹಾಕಿಕೊಂಡು ಕುಳಿತಿದ್ದವು. ಕೋತಿಗಳದ್ದು ಅನುಕರಣ ಬುದ್ಧಿಯೆಂಬುದು ಈತನಿಗೆ ಗೊತ್ತಿತ್ತು. ಆತ ತನ್ನ ಟೋಪಿಯನ್ನು ನೆಲಕ್ಕೆಸೆದ. ಎಲ್ಲ ಕೋತಿಗಳು ತಮ್ಮ ಟೋಪಿಗಳನ್ನು ನೆಲಕ್ಕೆಸೆದವು. ಆತ ತಕ್ಷಣ ಎಲ್ಲ ಟೋಪಿಗಳನ್ನು ಆಯ್ದುಕೊಂಡು ತನ್ನ ಚೀಲಕ್ಕೆ ತುಂಬಿಕೊಂಡು, ಮುಂದಿನೂರಿಗೆ ಓಡಿದ. ಅಂದು ಸಂಜೆ ತನ್ನ ಬುದ್ಧಿವಂತಿಕೆ ಕತೆಯನ್ನು ಮಕ್ಕಳಿಗೆ ಹೇಳಿದ. ಎಲ್ಲರೂ ಹೊಟ್ಟೆ ಹುಣ್ಣಾಗುವಷ್ಟು ನಕ್ಕರು.

ಇದಿಷ್ಟು ಕತೆಯ ಹಳೆಯ ಭಾಗ. ಈಗ ಹೊಸ ಭಾಗವನ್ನು ನೋಡಿ.

ಐವತ್ತು ವರ್ಷಗಳ ನಂತರ ಆತನ ಮೊಮ್ಮಗನೂ ವಂಶ ಪಾರಂಪರೆಯ ವೃತ್ತಿಯಲ್ಲಿದ್ದ. ಟೋಪಿ ತಯಾರಿಸಿ, ಊರಿಂದೂರಿಗೆ ಅಲೆಯುತ್ತ ಟೋಪಿಗಳನ್ನು ಮಾರುತ್ತಿದ್ದ. ಒಂದು ದಿನ ತಾತನಿಗಾದ ಅನುಭವವೇ ಮೊಮ್ಮಗನಿಗೂ ಆಯಿತು. ಆತ ಬಿಸಿಲಿನಲ್ಲಿ ಬಳಲಿ ಅದೇ ಮಾವಿನ ಮರದ ಕೆಳಗೆ ಮಲಗಿ ವಿಶ್ರಾಂತಿ ಪಡೆಯುತ್ತಿದ್ದ. ತಲೆಯ ಮೇಲೆ ಟೋಪಿ ಹಾಕಿಕೊಂಡಿದ್ದ. ಪಕ್ಕದಲ್ಲಿ ಟೋಪಿಗಳು ತುಂಬಿದ್ದ ಚೀಲವಿತ್ತು. ವಿಶ್ರಾಂತಿಯ ನಂತರ ಎದ್ದು ನೋಡಿದಾಗ ಚೀಲದಲ್ಲಿ ಒಂದು ಟೋಪಿಯೂ ಇರಲಿಲ್ಲ. ಮರದ ಮೇಲಿದ್ದ ಕೋತಿಗಳೆಲ್ಲ ಆತನ ಚೀಲದಿಂದ ಟೋಪಿಯನ್ನು ಹಾರಿಸಿಕೊಂಡು ಹೋಗಿ ತಲೆಯ ಮೇಲೇರಿಸಿಕೊಂಡು ನಲಿಯುತ್ತಿದ್ದವು.

ತಕ್ಷಣ ಆತನಿಗೆ ತನ್ನ ತಾತ ಹೇಳುತ್ತಿದ್ದ ಕತೆಯ ನೆನಪಾಯಿತು. ಆತ ಎದ್ದು ನಿಂತು ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿದ. ಕೋತಿಗಳೂ ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿದವು. ಆತ ನಿಂತಲ್ಲಿಯೇ ಮೂರು ಸುತ್ತು ಸುತ್ತಿದ. ಕೋತಿಗಳೂ ಮೂರು ಸುತ್ತು ಸುತ್ತಿದವು. ಆತ ಏನೇನು ಮಾಡಿದನೋ ಕೋತಿಗಳೂ ಅದನ್ನೇ ಮಾಡಿದವು. ಕೊನೆಗೆ ಆತ ತನ್ನ ತಲೆಯಿಂದ ಟೋಪಿಯನ್ನು ತೆಗೆದು ನೆಲಕ್ಕೆಸೆದ. ಆದರೆ ಒಂದು ಕೋತಿಯೂ ಟೋಪಿಯನ್ನು ಕಿತ್ತೆಸೆಯಲಿಲ್ಲ. ಎಲ್ಲ ಗಂಭೀರವಾಗಿ ಕುಳಿತಿದ್ದವು. ಆತನಿಗೆ ದಿಕ್ಕೇ ತೋಚಲಿಲ್ಲ. ಆಗ ಮರದ ಮೇಲಿಂದ ಒಂದು ಕೋತಿಯು ಕೆಳಗಿಳಿದು ಆತನ ಬಳಿ ಬಂದು 'ನಿನಗೊಬ್ಬನೇ ತಾತ ಇದ್ದಾನೆ ಎಂದುಕೊಂಡಿದ್ದೀಯಾ? ನಿಮ್ಮ ತಾತ ನಿನಗೆ ಕತೆ ಹೇಳಿದಂತೆ ನಮ್ಮ ತಾತಂದಿರೂ ನಮಗೆ ಕತೆಯನ್ನು ಹೇಳಿದ್ದಾರೆ' ಎಂದು ಹೇಳಿ ಮತ್ತೆ ಮರವನ್ನೇರಿ ಕುಳಿತುಕೊಂಡಿತು. ಟೋಪಿಯನ್ನೆಸೆಯಲಿಲ್ಲ.


ಪಾಪ! ಮೊಮ್ಮಗ ನಿರಾಶನಾಗಿ ಹೊರಟುಹೋದ.

ಈಗ ಮೊಮ್ಮಕ್ಕಳಿಗೆ ಕತೆಗಳನ್ನು ಹೇಳುವ ಅಜ್ಜ-ಅಜ್ಜಿಯರೂ ಇಲ್ಲ, ಅಜ್ಜ-ಅಜ್ಜಿಯರಿದ್ದರೂ ಕೇಳುವಷ್ಟು ಸಮಯ, ಸಹನೆ ಮೊಮ್ಮಕ್ಕಳಿಗಿಲ್ಲ. ಅವರಿಗೆ ಏನನ್ನಾದರೂ ನೀತಿ ಕತೆಗಳನ್ನು ಹೇಳಬೇಕಿದ್ದರೆ ಟೀವಿಯ ಮೂಲಕವೋ ಅಂತರ್ಜಾಲದ ಮೂಲಕವೋ ಹೇಳಬೇಕಾಗುತ್ತದೆ. ಅಲ್ಲವೇ?



■ ಅನಿಲ್ ರಮೇಶ್
9980027189

## ಮಕ್ಕಳೇ ಈ ಕಟ್ಟಡಗಳು ಯಾವುವು ಹೇಳಬಲ್ಲಿರಾ ?

| ಅಂದು | ಇಂದು |
| --- | --- |
|  |  |
|  |  |
|  |  |
|  |  |

ಚಿತ್ರ ಸಂಗ್ರಹ : ಅರ್ಜುನ್, ೧೦ನೇ ತರಗತಿ

## ಮಕ್ಕಳಿಗೊಂದಷ್ಟು ಕಿವಿಮಾತು
### (ಅ ಯಿಂದ ಅಃ)

ಅರಳಿದ ಹೂಗಳ ತೆರದಲಿ ನಗುತಲಿರಿ
ಆಟದ ಅಂಗಳದಲಿ ಆಡಿ ಕುಣಿಯಿರಿ

ಇರುವುದೆಲ್ಲರೊಡನೆ ಹಂಚಿಕೊಳಲು ಕಲಿಯಿರಿ
ಈಶನ ಪ್ರತಿದಿನ ತಪ್ಪದೆ ನೆನೆಯಿರಿ

ಉಪಕಾರ ಮಾಡಿ ಸಮಯ ಸಿಕ್ಕಾಗ
ಊಟಕ್ಕಿರಲಿ ಕಾಳು, ತರಕಾರಿ, ಹಣ್ಣಿನ ಭಾಗ

ಋಷಿಯಂತೆ ಧ್ಯಾನಿಸಿ ಏಕಾಗ್ರತೆಗಾಗಿ
ಎಲೆಮರೆಯ ಕಾಯಂತೆ ಬೆಳೆಯುವವರಾಗಿ

ಏನೇ ಕೆಲಸವ ಮಾಡಿ, ಅದರಲಿ ಶಿಸ್ತಿರಲಿ
ಐಕ್ಯಮತ್ಯವ ಹೊಂದಿರಿ ಎಲ್ಲರಲಿ


ಒಲವೆಂಬ ಸಿಹಿಯ ಹಂಚಿ ಎಲ್ಲೆಡೆಯೂ
ಓದಿ, ಬರೆದು ಜಾಣರಾಗುವುದೇ ಮುನ್ನಡೆಯು

ಔದಾರ್ಯದಿಂದ ಕೂಡಿದ ಮನವನು ಹೊಂದಿರಿ
ಅಂತರಂಗದಿ ಅನುಕಂಪ ತುಂಬಿರಿ
ಅಃ (ಅಹಾ!) ಜಗವೇ ಮೆಚ್ಚುವ ಮಾದರಿಯಾಗಿರಿ

–ಭಾರತಿ ಶ್ರೀನಾಥ್

## ರೇಖಾಚಿತ್ರಗಳು







ಉಜ್ವಲ್ ಜಗದೀಶ್
ಹತ್ತನೇ ತರಗತಿ

## ನಗೆಹನಿ

**ಶಂಕರ** : ನಾವು ಮಹಾಭಾರತ ನೋಡುವುದಕ್ಕೋಸ್ಕರ ಟಿ.ವಿ. ತೆಗೆದುಕೊಳ್ಳುವ ಅವಶ್ಯಕತೆಯೇ ಇಲ್ಲಾ.
**ಶ್ರೀಧರ** : ಏಕೆ? ಟಿ.ವಿ. ಮೊದಲೇ ತೆಗೆದುಕೊಂಡಿದ್ದೀರಾ?
**ಶಂಕರ** : ನಮ್ಮ ಮನೆಯಲ್ಲೇ ಮಹಾಭಾರತ, ಅಭ್ಯಾಸ ಮಾಡದೆಯೇ ನಡೆಯುತ್ತದೆ ಪ್ರತಿದಿವಸ.

**ಸುಭಾಷಿಣಿ** : ನಮ್ಮ ಅತ್ತೆಯವರು ಈ ಜಾಹೀರಾತುಗಳಲ್ಲಿ ತೋರುವ ಯಾವ ಬ್ರಷ್ಷು, ಪೇಸ್ಟು, ಉಪಯೋಗಿಸಿ ಹಣ–ವ್ಯಯ ಮಾಡುವುದೇ ಇಲ್ಲಾ.
**ರಾಜಮ್ಮ** : ಬರೀ ಬೆರಳುಗಳಲ್ಲೇ ಉಜ್ಜುತ್ತಾರ?
**ಸುಭಾಷಿಣಿ** : ಅವರಿಗೆ ಹಲ್ಲುಗಳೇ ಇಲ್ಲಾ.

**ಶಾಲಿನಿ** : ಗಂಡ ಹೆಂಡಿರ ಜಗಳ ಉಂಡು ಮಲಗುವವರೆಗೆ ಎನ್ನುತ್ತಾರಲ್ಲ ನಿಜವೆ?
**ಶಾಂತಲ** : ನಮ್ಮ ಮನೆಯಲ್ಲಿ ಜಗಳ ಪ್ರಾರಂಭವಾಗುವುದೇ ಉಂಡು ಮಲಗುವಾಗ!

**ಸುಗುಣ** : ಏನೇ ರಾತ್ರಿ ರಾಮಾಯಣ ನೋಡಿದೆಯಾ ಟಿ.ವಿ.ಯಲ್ಲಿ?
**ಶಶಿ** : ಇಲ್ಲಾ !
**ಸುಗುಣ** : ಏಕೆ?
**ಶಶಿ** : ಜಗಳಾಯಣ ನಡೆಯುತ್ತಿತ್ತು ನಮ್ಮ ಮನೆಯಲ್ಲಿ !

–ಕೆ.ಎಲ್. ಶಾಂತ

## ಮಕ್ಕಳ ಪ್ರಶ್ನೆಗೆ............................. ಉತ್ತರ ?

ಜಂಕ್ ಫುಡ್ ಮಾರ್‍ತಾರೆ
ತಿನ್ನಬೇಡಿ ಅನ್ತಾರೆ

ಮನೇಲಿ ಮಾಡಿದ್ದು ತಿನ್ನಿ ಅನ್ತಾರೆ
ಪಾನೀಪುರಿ ಬೀದಿಲಿ ಕೊಡಿಸ್ತಾರೆ

ಆಟ ಆಡಿ ಅನ್ತಾರೆ
ಹೋಂವರ್ಕ್ ಕೊಡ್ತಾರೆ

ಮೊಬೈಲ್ ಗೇಮ್ ಕಲಿಸ್ತಾರೆ
ಆದ್ರೆ ಆಟ ಆಡ್ಬೇಡಿ ಅನ್ತಾರೆ

ಕಂಪ್ಯೂಟರ್ ಕಲೀರಿ ಅನ್ತಾರೆ
ಕಣ್ಣು, ಬೆನ್ನು ಬೇನೆ ಬರಿಸುತ್ತಾರೆ

ಬೀಡಿ ಸಿಗರೇಟ್ ಮಾರ್‍ತಾರೆ
ಸೇದ್ಬೇಡಿ ಅಂತಾರೆ

ವಾಹನ ಖರೀದಿ ಮಾಡ್ತಾರೆ
ನಡೆಯೋದು ಒಳ್ಳೇದು ಅನ್ತಾರೆ

ಪರಿಸರ ಹಾಳು ಮಾಡ್ತಾರೆ
ಆಸ್ತಮಾ ಅಲರ್ಜಿ ಅಂತಾರೆ

ಟೀವಿ ಮನೆಗೆ ತರ್‍ತಾರೆ
ನೋಡ್ಬೇಡಿ ಅನ್ತಾರೆ

ವ್ಯಾಯಾಮ ಮಾಡಸ್ತಾರೆ
ಮೂಟೆ ಪುಸ್ತಕ ಹೊರಸ್ತಾರೆ

ದೊಡ್ಡೋರ್ ಹೇಳಿದ ಹಾಗೆ ಕೇಳಿ ಅಂತಾರೆ
ದೊಡ್ಡೋರೆಲ್ಲಾ ಜಾಣರಲ್ಲ ಅನ್ತಾರೆ

**ಈ ಕಷ್ಟಗಳೆಲ್ಲ ಮಕ್ಕಳಿಗಿದೆ, ಯಾರು ಉತ್ತರ ಕೊಡ್ತಾರೆ ?**

ಭ್ರಮರ ಗೋಪಿನಾಥ್



ಬಸವನಗುಡಿ 'ಕಹಳೆ ಬಂಡೆ' ಉದ್ಯಾನವನದಲ್ಲಿರುವ ಪುತ್ಥಳಿ.
ಬೃಹಚ್ಚರಣ ಸಮುದಾಯದ ಹಿರಿಯ ಶ್ರೀ ಡಿ.ವಿ. ಗುಂಡಪ್ಪ ನವರ 128ನೇ ಹುಟ್ಟುಹಬ್ಬದ (17.3.1887) ಸವಿನೆನಪು ಸಂಘದ ನಮನ.

# ಮಂಕುತಿಮ್ಮನ ಕಗ್ಗದ ತಾತ್ಪರ್ಯ

■ ಶ್ರೀಮತಿ ಜೆ.ಪಿ. ಲಕ್ಷ್ಮೀದೇವಿ

ಇಹುದೋ ಇಲ್ಲವೋ ತಿಳಿಯಗೊಡದೊಂದು ವಸ್ತು ನಿಜ!
ಮಹಿಮೆಯಿಂ ಜಗವಾಗಿ ಜೀವ ವೇಷದಲಿ
ವಿಹರಿಪುದೊಳ್ಳಿತೆಂಬುದು ನಿಸದ ವಾದೊಡಾ
ಗಹನ ತತ್ವಕೆ ಶರಣೋ – ಮಂಕುತಿಮ್ಮ

ಸಾಧಾರಣವಾಗಿ ಕಾವ್ಯದ ಮೊದಲ ಪದ್ಯ ಯಾವುದಾದರೂ ದೇವರನ್ನು ಪ್ರಾರ್ಥಿಸುವುದು ಒಂದು ಶುಭಕರ ಸಂಪ್ರದಾಯ ವಾಗಿದೆ. ಇಲ್ಲಿ ನಮಗೆ ಅಗೋಚರವಾದ ಒಂದು ಪರಮಶಕ್ತಿಗೆ ಶರಣಾಗುವಂತೆ ಮೊದಲ ಮೂರು ಪದ್ಯಗಳಲ್ಲಿ ವಿನಂತಿಸಿದ್ದಾರೆ ತಿಮ್ಮ ಗುರು.

ದೇವರ ಅಸ್ತಿತ್ವ ಇದೆಯೋ ಇಲ್ಲವೋ ನಮಗೆ ತಿಳಿಯದು. ಆದರೆ ನಮ್ಮನ್ನೆಲ್ಲಾ ಅಗೋಚರವಾಗಿ ಆಳುವ ಒಂದು ಪರಮಶಕ್ತಿ ಅಥವಾ ವಸ್ತು ಇದೆ. ಅದನ್ನೇ ದೇವರು, ಭಗವಂತ ಎನ್ನುತ್ತೇವೆ. ಆ ಪರಮಶಕ್ತಿ ಇಡೀ ವಿಶ್ವವನ್ನು ವ್ಯಾಪಿಸಿ ತನ್ನ ಮಹಿಮೆ ಅಥವಾ ವಿಭೂತಿಗಳಿಂದ ನಮ್ಮನ್ನು ಸೂತ್ರದ ಬೊಂಬೆ ಗಳಂತೆ ಆಡಿಸಿ, ವಿಹರಿಸುತ್ತಾ ವಿಜೃಂಭಿಸಿದೆ. ಹಿಂದೆ ಋಷಿಗಳು ದಾರ್ಶನಿಕರು, ಸಾತ್ವಿಕರು, ಆ ಭಗವಂತನ ಸೃಷ್ಟಿ ಲೀಲೆ ಪ್ರಪಂಚದ ಬೆಳವಣಿಗೆಯನ್ನು ಕಂಡು ಅನುಭಾವಿಗಳಾಗಿ ನಿಬ್ಬೆರಗಾಗಿ ನಲಿದು ಅವನನ್ನು ಹೊಗಳಿ ಸ್ತುತಿಸಿದರು. ಅನೇಕರು ಅವರ ಪುಣ್ಯಫಲದಂತೆ ಸಹಸ್ರಾರು ಕೋಟಿ ಸೂರ್ಯನಿಗೆ ಸಮನಾದ ಭಗವಂತನನ್ನು ಕಂಡರು. ಅವನ ವೈಭವ ಲೀಲೆ, ಮಹಿಮ ಶಕ್ತಿಗೆ ಮರುಳಾಗಿ ಸ್ತುತಿಸಿದಾಗ ಹೊರಬಂದ ಪವಿತ್ರವಾದ ನುಡಿಗಳೇ ವೇದ ಮತ್ತು ಉಪನಿಷತ್ತುಗಳಾಗಿ ಮೂಡಿಬಂದವು.

# 60 ಸಂವತ್ಸರಗಳ ಕಥೆ

'ಪ್ರಭವ' ಎಂಬ ಒಂದು ರಾಜ್ಯ. 'ವಿಭವ' ಅದರ ರಾಜಧಾನಿ. 'ಶುಕ್ಲ' ಪಕ್ಷದಲ್ಲಿ ಹುಟ್ಟಿದ 'ಪ್ರಮೋದೂತ'ನು ಆ ದೇಶದ ರಾಜನಾಗಿದ್ದನು. 'ಪ್ರಜೋತ್ಪತ್ತಿ'ಯು ಮುಖ್ಯಮಂತ್ರಿಯಾಗಿಯೂ 'ಅಂಗಿರಸ'ನು ಸೈನ್ಯಾಧಿಕಾರಿಯೂ ಆಗಿದ್ದರು.

ಒಂದು ದಿನ ರಾಜನು ಮಾರುವೇಷದಲ್ಲಿ ನಮ್ರ ಸಚಿವ 'ಶ್ರೀಮುಖ' ನೊಡಗೂಡಿ ಪ್ರಜೆಗಳ ಸ್ಥಿಗತಿಗಳನ್ನು ತಿಳಿಯಲು ಹೊರಟನು. ಆ ಸಮಯದಲ್ಲಿ 'ಭಾವ' ಮತ್ತು 'ಯುವ' ಎಂಬ ದಾರಿಹೋಕರು ರಾಜನ 'ಧಾತೃ'ತ್ವ ಮತ್ತು 'ಈಶ್ವರ'ತ್ವದ ಬಗ್ಗೆ ಮಾತನಾಡಿಕೊಳ್ಳುತ್ತಿದ್ದುದು ರಾಜನ ಕಿವಿಗೆ ಬಿದ್ದಿತು, 'ಬಹುಧಾನ್ಯ'ದಿಂದ ಸಮೃದ್ಧವಾಗಿ ನಾಡು 'ಪ್ರಮಾಧಿ' ಪಥದಲ್ಲಿ 'ವಿಕ್ರಮ'ದಿಂದ ಅಭ್ಯುದಯ ಹೊಂದುತ್ತಿದೆ ಎಂಬ ಅವರ ಅನಿಸಿಕೆಯಿಂದ ರಾಜನು ಹರ್ಷಿಸಿದನು.

ರಾಜನ ಅಣತಿಯಂತೆ 'ವಿಷು' ಎಂಬ ಪಕ್ಕದ ರಾಜ್ಯದಲ್ಲಿ ಗೂಢಚರ್ಯೆ ನಡೆಸಿಕೊಂಡು ಬಂದ 'ಚಿತ್ರಭಾನು' ಮತ್ತು 'ಸ್ವಭಾನು' ಎಂಬ ಗುಪ್ತಚಾರರು ಆ ರಾಜ್ಯವನ್ನು ಸುಲಭವಾಗಿ ಜಯಿಸಬಹುದೆಂದು ರಾಜನಿಗೆ ಅರುಹಿದರು. ಈ ಸಮಯದಲ್ಲಿ ರಾಜಪುತ್ರರಾದ 'ತಾರಣ'ಮತ್ತು 'ಪಾರ್ಥಿವ'ರ ಪುಂಡಾಟದಿಂದ ರಾಜ ಬೊಕ್ಕಸಕ್ಕಾಗುತ್ತಿದ್ದ 'ವ್ಯಯ'ವನ್ನು 'ಸರ್ವಜಿತು' ಮತ್ತು 'ಸರ್ವಧಾರಿ'ಗಳ ನಾಯಕತ್ವದಲ್ಲಿ ಪ್ರಜೆಗಳು 'ವಿರೋಧಿ'ಸುತ್ತಾ 'ವಿಕೃತಿ'ಯಿಂದ 'ಖರ' (ಖಾರ)ವಾಗಿ ರಾಜನನ್ನು ದೂಷಿಸುತ್ತಿದ್ದರು. ಇದನ್ನು ಲೆಕ್ಕಿಸದೇ ರಾಜನು ತನ್ನ ರಾಜ್ಯವು 'ನಂದನ'ವೆಂದೂ, ತಾನು 'ವಿಜಯ'ನಾಗಿ 'ಜಯ' ಸಾಧಿಸುವೆನೆಂದೂ ದಂಡೆತ್ತಿ ಹೊರಟನು. 'ಮನ್ಮಥ'ನಂತೆ ಇದ್ದರೂ 'ದುರ್ಮುಖಿ'ಯಾದ ಶತ್ರು ರಾಜನ ಬಗ್ಗೆ ತಿಳಿಯಲು 'ಹೇವಿಳಂಬಿ' ಮತ್ತು 'ವಿಳಂಬಿ' ಎಂಬ ನಮ್ರ ಸೇವಕರನ್ನು ನಿಯಮಿಸಿದನು. ಅವರಿಂದ ಶತ್ರು ರಾಜನು 'ವಿಕಾರಿ'ಯಾದರೂ ಸುಂದರಿಯಾದ 'ಶಾರ್ವರಿ' ಎಂಬುವವಳನ್ನು ರಾಣಿಯಾಗಿಯೂ, 'ಪ್ಲವ' ಎಂಬ ಪುತ್ರನನ್ನು ಹೊಂದಿರುವುದಾಗಿಯೂ ತಿಳಿಯಿತು. ಶತ್ರು ರಾಜನಿಗೆ 'ಶುಭಕೃತ್' ಮತ್ತು 'ಶೋಭಕೃತ್' ಎಂಬ ಎರಡು ಹೆಸರುಗಳನ್ನುಳ್ಳ ಮಂತ್ರಿಯಿದ್ದನು. ಅವನು ಬಹಳ 'ಕ್ರೋಧಿ'ಯಾಗಿದ್ದರೂ 'ವಿಶ್ವಾವಸು'ವೂ 'ಪರಾಭವ'ವನ್ನು ಕಾಣದವನೂ ಆಗಿದ್ದನು. 'ಪ್ಲವಂಗ' ಮತ್ತು 'ಕೀಲಕ' ಎಂಬ ಪುತ್ರರೂ, 'ಸೌಮ್ಯ' ಎಂಬ ಪತ್ನಿಯೂ 'ಸಾಧಾರಣ'ವಾಗಿ ಮಂತ್ರಿಗೆ ನೆರವಾಗುತ್ತಿದ್ದರು. ಈ ನಡುವೆ 'ವಿರೋಧಿಕೃತ್' ಎಂಬ ಸಾಮಂತನು 'ಪರೀಧಾವಿ' ಸ್ವಭಾವದವನಾಗಿ 'ಪ್ರಮಾದೀಚ'ನಂತೆ ಮೇಲೆ 'ಆನಂದ'ವನ್ನು ತೋರಿದರೂ ಅಂತರ್ಯದಲ್ಲಿ 'ರಾಕ್ಷಸ'ನಾಗಿದ್ದನು. ಅವನು 'ನಳ' ಮತ್ತು 'ಪೈಂಗಳ' ಎಂಬ ಪಾಳೆಯಗಾರರ ಸಹಾಯ ಪಡೆದು 'ಕಾಳಯುಕ್ತಿ'ಯಿಂದ ಶತ್ರು ರಾಜನೊಡನೆ ಪಿತೂರಿ ನಡೆಸಿದನು. ಆದರೆ ಈ ದ್ರೋಹದ ಸುಳಿವು 'ಸಿದ್ದಾರ್ಥಿ' ಮತ್ತು 'ರೌದ್ರಿ' ಎಂಬ ವೀರ ದೇಶಪ್ರೇಮಿಗಳಿಗೆ ಸಿಕ್ಕಿ, ಅವರು ಈ 'ದುರ್ಮತಿ'ಗಳ ಪ್ರಭಾವವನ್ನು ತಡೆದು ಇವರ ಕೃತ್ಯಗಳನ್ನು 'ದುಂಧುಭಿ', 'ರುಧಿರೋದ್ಗಾರಿ'ಯೋಪಾದಿಯಲ್ಲಿ ಬಹಿರಂಗ ಪಡಿಸಿದರು. ಇವರಿಬ್ಬರ ಶೌರ್ಯದಿಂದಾಗಿ 'ರಕ್ತಾಕ್ಷಿ' ಮತ್ತು 'ಕ್ರೋಧನ' ದಿಂದ ಮುಕ್ತವಾದ ರಾಜ್ಯವು 'ಅಕ್ಷಯ'ವಾಗಿ ಅಭ್ಯುದಯ ಹೊಂದಿತು.

**ಎಂ.ಪಿ. ರಂಗನಾಥನ್**
ಸಂಘದ ಪೋಷಕ ಸದಸ್ಯ

## ಸುದ್ದಿ ಮನೆ



### ಶುಭ ವಿವಾಹ

ಸಂಘದ ಹಿಂದಿನ ಅಧ್ಯಕ್ಷರ ಲೇಟ್ ಶ್ರೀ ಪಟ್ಟಾಭಿ ರಾಮಯ್ಯ ಶ್ರೀಮತಿ ಮೊಮ್ಮಗ ಹಾಗೂ ಸದಸ್ಯ ಶೀ ಟಿ.ಪಿ. ಜಗನ್ನಾಥ್ ಮತ್ತು ಶ್ರೀಮತಿ ಪದ್ಮಾರವರ ಪುತ್ರ ಚಿ. ಟಿ.ಜೆ. ರಘುರಾಮ್‌ರವರ ವಿವಾಹವು ಚಿ.ಸೌ. ಸಮನ್ವಿತಾ ನಾಗೇಂದ್ರರವರೊಂದಿಗೆ ದಿನಾಂಕ 29.01.2015ರಂದು ನಂಜನಗೂಡಿನಲ್ಲಿ ನೆರವೇರಿತು. ಹಾಗೂ ದಿನಂಕ 1.2.2015ರಂದು ಆರತಕ್ಷತೆ ಬೆಂಗಳೂರಿನಲ್ಲಿ ನೆರವೇರಿತು.

✦ ✦

ಸಂಘದ ಪೋಷಕರಾದ ಶ್ರೀಮತಿ ಲಲಿತಾ ಮೂರ್ತಿಯವರ ಮೊಮ್ಮಗಳು ಹಾಗೂ ಸದಸ್ಯ ಶ್ರೀ ಆರ್.ಎಸ್. ವೆಂಕಟೇಶ್ ಮತ್ತು ಶ್ರೀಮತಿ ರಾಧಾರವರ ಪುತ್ರಿ ಚಿ.ಸೌ. ದೀಪ್ತಿ ವೆಂಕಟೇಶ್‌ರವರ ವಿವಾಹವು ಚಿ। ಅಜೇಯ್ ಭಾರಧ್ವಾಜ್‌ರವರೊಂದಿಗೆ ದಿನಾಂಕ 5.2.2015ರಂದು ಬೆಂಗಳೂರಿನಲ್ಲಿ ನೆರವೇರಿತು.

✦ ✦

ಸಂಘದ ಸದಸ್ಯ ಶ್ರೀ ಭಾಸ್ಕರ್ ಹಾಗೂ ಶ್ರೀಮತಿ ನಾಗವೇಣಿಯವರ ಪುತ್ರ ಚಿ॥ ನಕುಲ್ ಭಾಸ್ಕರ್‌ರವರ ವಿವಾಹವು ಚಿ.ಸೌ. ಶ್ವೇತ ಮುರಳೀಧರ್‌ರವರೊಂದಿಗೆ ದಿ. 5.02.20.15ರಂದು ಬೆಂಗಳೂರಿನಲ್ಲಿ ನೆರವೇರಿತು.

✦ ✦

ಸಂಘದ ಸದಸ್ಯ ಶ್ರೀ ಗುಂಜೂರು ನಾಗರಾಜ್‌ರವರ ಪುತ್ರ ಎಸ್. ಅಜೇಯ್ ಕುಮಾರ್‌ರವರ ವಿವಾಹವು ಡಾ. ಕುಮಾರಸ್ವಾಮಿರವರ ಪುತ್ರಿ ಚಿ.ಸೌ. ಅಶ್ವಿನಿರವರೊಂದಿಗೆ 15.2.2015ರಂದು ಬೆಂಗಳೂರಿನಲ್ಲಿ ನೆರವೇರಿತು. ಇದೇ ಸಂದರ್ಭದಲ್ಲಿ ಸಂಘದ ಸದಸ್ಯ ಹಾಗೂ ಖ್ಯಾತ ಲೇಖಕ ಶ್ರೀ ಜಿ.ಎಸ್. ಸತ್ಯಮೂರ್ತಿಯವರಿಂದ 'ಮದುವೆಯ ಮಂದಾರ' (ವಿವಾಹ ದೀಪಿಕೆ) ಎಂಬ ಪುಸ್ತಕ ಬಿಡುಗಡೆಗೊಳಿಸಲಾಯಿತು.

✦ ✦

ಸಂಘದ ಸದಸ್ಯ ಹೊಸಕೋಟೆ ಶ್ರೀ ಎಸ್ ಶ್ರೀನಿವಾಸನ್ ಹಾಗೂ ಶ್ರೀಮತಿ ಶೈಲಾರವರ ಪುತ್ರಿ ಚಿ.ಸೌ. ಶಾರ್ವರಿ ಯವರ ವಿವಾಹವು ಚಿ. ನಾಗೇಂದ್ರ ವಿ. ತಿಲಕ್‌ರವರೊಂದಿಗೆ ದಿನಾಂಕ 8.3.2015ರಂದು ಬೆಂಗಳೂರಿನಲ್ಲಿ ನೇರವೇರಿತು.

✦ ✦

ಸಂಘದ ಸದಸ್ಯ ಶ್ರೀ ಎ.ವಿ. ಮಂಜುನಾಥ ಹಾಗೂ ಶ್ರೀಮತಿ ಶುಭಾರವರ ಪುತ್ರ ಚಿ. ಅರುಣ್ ಪ್ರಸಾದ್‌ರವರ ವಿವಾಹವು ಚಿ.ಸೌ. ರಮ್ಯ ಬಾಲಕೃಷ್ಣ ರವರೊಂದಿಗೆ ದಿ. 9.3.2015ರಂದು ಬೆಂಗಳೂರಿನಲ್ಲಿ ನೆರವೇರಿತು.

ಬೃಹಚ್ಚರಣ ಸಂಘವು ಎಲ್ಲಾ ನವದಂಪತಿಗಳಿಗೆ ಶುಭ ಕೋರುತ್ತದೆ.

✦ ✦

### ಉಪನಯನ

ಸಂಘದ ಸದಸ್ಯರು ಲೆಕ್ಕಪತ್ರ ಪರಿಶೋಧಕರು ಆಗಿರುವ ಶ್ರೀ ಬಿ.ಎನ್.ಜಿ.ಕುಮಾರ್ ಮತ್ತು ಶ್ರೀಮತಿ ಕಾವೇರಿಯವರ ಪುತ್ರ ಹಾಗೂ ಸಂಘದ ಹಿರಿಯ ಚೇತನರಾದ ಶ್ರೀಮತಿ. ಶಾರದಾ ನಾರಾಯಣ ಸ್ವಾಮಿ ಯವರ ಮೊಮ್ಮಗನಾದ ಚಿ. ಸಾಯಿಸತ್ಯನಾರಾಯಣನ ಉಪನಯನವು ದಿನಾಂಕ 30.01.2015ರಂದು ಬೆಂಗಳೂರಿನಲ್ಲಿ ನೆರವೇರಿತು. ವಟುವಿಗೆ ಸಂಘದಿಂದ ಶುಭಹಾರೈಕೆಗಳು.




## ಮಲಬದ್ಧತೆಗೆ ಕೆಲವು ಪರಿಹಾರ

ಹಳೆಯ ಕಾಲದಲ್ಲಿ, ಕೆಂಪು ಕಲ್ಲುಸಕ್ಕರೆ, ತವಕ್ಷೀರ, ಕಲ್ಕಾರು, ಇಸಬಗೋಲು ಕಾಳು ಎಲ್ಲವನ್ನು ಸರಿಯಾದ ಪ್ರಮಾಣದಲ್ಲಿ ಬೆರೆಸಿ ಒರಳಿನಲ್ಲಿ ಹಾಕಿ ಕುಟ್ಟಿ ಪುಡಿಮಾಡಿ, ಪ್ರತಿದಿವಸ ರಾತ್ರಿ ಹಾಲಿನಲ್ಲಿ ಎರಡು ಚಮಚ ಬೆರೆಸಿ ಕುಡಿದರೆ ಪರಿಹಾರ ಸಿಗುತ್ತಿತ್ತು. ಆದರೆ ಈಗ Medical shop सत – इसबगोल (psyllium husk) ಸಿಗುತ್ತದೆ. ಇದನ್ನು ವಾರದಲ್ಲಿ ಎರಡು ಅಥವಾ ಮೂರು ದಿನ ರಾತ್ರಿ ಬಿಸಿನೀರಿನಲ್ಲಿ ಎರಡು ಚಮಚ ಪುಡಿ ಹಾಕಿ ತೆಗೆದುಕೊಂಡರೆ ಪರಿಹಾರ ಸಿಗುತ್ತದೆ.

ವೇಳೆಗೆ ಸರಿಯಾಗಿ ಅಗತ್ಯ ಪ್ರಮಾಣದ ಆಹಾರ ಸೇವಿಸಿ ಯಥೇಚ್ಛವಾಗಿ ನೀರು ಕುಡಿಯಿರಿ. ಬೆಳಗಿನ ಉಪಹಾರಕ್ಕೆ ಅರ್ಧಗಂಟೆ ಮುಂಚೆ ಮತ್ತು ರಾತ್ರಿ ಮಲಗುವ ಮುಂಚೆ ಒಂದು ಬಟ್ಟಲು ಬಿಸಿನೀರು ಕುಡಿಯಬೇಕು. ಮಲಬದ್ಧತೆ ನಿವಾರಣೆಯಾಗಿ ಜೀರ್ಣಶಕ್ತಿ ಹೆಚ್ಚುತ್ತದೆ.

1) ರಾತ್ರಿ ವೇಳೆ ಬಾಳೆಹಣ್ಣು ಅಥವಾ ಪಪ್ಪಾಯಿ ತಿಂದರೆ ಮಲಬದ್ಧತೆ ನಿವಾರಣೆಯಾಗಿ ಜೀರ್ಣಶಕ್ತಿ ಹೆಚ್ಚುತ್ತದೆ.
2) ಪಪ್ಪಾಯಿ ಕಾಯಿ ಹೋಳುಗಳಿಗೆ ಜೀರಿಗೆ ಪುಡಿ, ಕರಿ ಮೆಣಸಿನ ಪುಡಿ, ಉಪ್ಪು ಮತ್ತು ನಿಂಬೆರಸ ಚೆನ್ನಾಗಿ ಮಿಶ್ರಮಾಡಿ ಸೇವಿಸುವುದರಿಂದ ಮಲಬದ್ಧತೆ ನಿವಾರಣೆಯಾಗಿ ಜೀರ್ಣಶಕ್ತಿ ಹೆಚ್ಚುತ್ತದೆ.
3) ಸೋರೆಕಾಯಿ ತುರಿದು ಹಿಂಡಿದರೆ ರಸ ಬರುತ್ತದೆ. ಒಂದು ಬಟ್ಟಲು ರಸಕ್ಕೆ ಸ್ವಲ್ಪ ಉಪ್ಪು ಬೆರೆಸಿ ದಿನಕ್ಕೊಂದಾವರ್ತಿ ಸೇವಿಸಿದರೆ ಬಹಳ ಕಾಲದಿಂದ ಗುಣವಾಗದಿದ್ದ ಮಲಬದ್ಧತೆ ನಿವಾರಣೆಯಾಗಿ ಜೀರ್ಣಶಕ್ತಿ ಹೆಚ್ಚುತ್ತದೆ.
4) ಮಗುವಿಗೆ ಒಂದು ಟೀ ಚಮಚ ಸೊಂಪಿನ ಕಷಾಯವನ್ನು ಹಾಲಿನೊಂದಿಗೆ ಬೆರೆಸಿ ಕುಡಿಸಿದರೆ ಮಲಬದ್ಧತೆ ಗುಣ ಕಂಡುಬರುತ್ತದೆ.
5) ಪ್ರತಿದಿನ ರಾತ್ರಿ ಕಳಿತ ಬಾಳೆಹಣ್ಣಿನೊಂದಿಗೆ ಏಲಕ್ಕಿಯನ್ನು ಸೇರಿಸಿ ಸೇವಿಸುವುದರಿಂದ ಮಲಬದ್ಧತೆ ಗುಣವಾಗುತ್ತದೆ.
6) ಗಾಳಿ ಸೇವನೆ ಮತ್ತು ಯೋಗಾಸನದಿಂದಲೂ ಮಲಬದ್ಧತೆ ನಿವಾರಣೆಯಾಗಿ ಜೀರ್ಣಶಕ್ತಿ ಹೆಚ್ಚುತ್ತದೆ.



■ ಕೆ.ಎಲ್. ಶಾಂತ

### ನಾಮಕರಣ

ಸಂಘದ ಸದಸ್ಯ ಶ್ರೀ ಹೆಚ್.ಎಸ್. ಪರಮೇಶ್ವರ್ ಮತ್ತು ಶ್ರೀಮತಿ ರಮ್ಯಾ ಅಶ್ವಥ್ ದಂಪತಿಗಳ ಪುತ್ರ ಸ್ಕಂದನ ನಾಮಕರಣ ಮಹೋತ್ಸವವು ದಿನಾಂಕ 8.3.2015ರಂದು ಬೆಂಗಳೂರಿನಲ್ಲಿ ನೆರವೇರಿತು. ಮಗುವಿಗೆ ಸಂಘದಿಂದ ಶುಭಹಾರೈಕೆಗಳು.

## ಸ್ವಚ್ಛತಾ ಅಭಿಯಾನ?

ಬಂಧುಗಳೇ, ಈಚಿನ ದಿನಗಳಲ್ಲಿ ಮನೆಮಾತಾಗಿರುವ ಸ್ವಚ್ಛತಾ ಅಭಿಯಾನದ ವಿಷಯವಾಗಿ ನನ್ನ ಮನಸ್ಸಿಗೆ ಬಂದ ಕೆಲವು ಅನಿಸಿಕೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಪ್ರಧಾನ ಮಂತ್ರಿಗಳು ದೇಶದ ಸ್ವಚ್ಛತೆ ಬಗ್ಗೆ ಕಾಳಜಿ ವಹಿಸಿ, ಮಲಿನವಾದ ಪವಿತ್ರಗಂಗೆಯನ್ನು ಶುದ್ಧೀಕರಣ ಮಾಡಲು ಹೊರಟಿರುವುದಕ್ಕೆ ಅಭಿನಂದನೆಗಳು.

ಮೊದಲಿಗೆ ನಮ್ಮ ನದಿಗಳು ಮಲಿನಗೊಂಡದ್ದೆಂತು ಎಂಬುದನ್ನು ಅರಿತುಕೊಂಡರೆ ನಿರ್ಮಲೀಕರಣ ಸುಲಭವಾದೀತು.

ಹಿಂದೂಗಳಿಗೆ ಪವಿತ್ರವಾದ ಗಂಗಾ ನದಿಯಲ್ಲದೆ ಇನ್ನೂ ಅನೇಕ ಜೀವನದಿಗಳನ್ನು ಮಲಿನ ಮಾಡಲು ಬಿಟ್ಟವರಾರು? ಕೈಗಾರಿಕಾ ಅಭಿವೃದ್ಧಿಯ ಹೆಸರಿನಲ್ಲಿ ಹಾನಿಕಾರಕ ತ್ಯಾಜ್ಯಗಳನ್ನು ನದಿಗಳಿಗೆ ಬಿಡಲು ಅನುಮತಿಗಳನ್ನು ಕೊಟ್ಟವರಾರು?.

ಮಹಾತ್ಮಗಾಂಧಿಯವರು ಸ್ವಾತಂತ್ರ್ಯ ಪೂರ್ವದಿಂದಲೂಸ್ವಂತ ಹಾಗೂ ಸಾರ್ವಜನಿಕ ಸ್ಥಳಗಳ ಸ್ವಚ್ಛತೆಯ ಬಗ್ಗೆ ಕಾಳಜಿ ಉಳ್ಳವರಾಗಿದ್ದುದನ್ನು ಮರೆತಂಥ ದೇಶವಿದು. ಇಂದು ರಾಜಕೀಯದಲ್ಲಿರುವವರು ಸ್ವಚ್ಛತೆಯ ಬಗ್ಗೆ ಕಾಳಜಿ ತೋರದಿರುವುದು ವಿಪರ್ಯಾಸ.

ನಮ್ಮ ದೇಶದಲ್ಲಿ ತಮ್ಮ ಮನೆ ಕಸವನ್ನು ಪಕ್ಕದ ಮನೆಯ ಮುಂದೆ ಹಾಕುವ ಪ್ರವೃತ್ತಿ ಹೊಂದಿರುವವರೇ ಜಾಸ್ತಿ. ಹೀಗಿರುವಾಗ ದೇಶದ ಸ್ವಚ್ಛತೆಯ ಮಾತೆಲ್ಲಿ? ನಮ್ಮ ಉದ್ಯಾನ ನಗರಿಯಲ್ಲಿ ಜನಸಂದಣಿ ಇರುವ ಜಾಗಗಳಲ್ಲಿ ಎಲ್ಲಿಯೂ ಶೌಚಾಲಯಗಳಿಲ್ಲ. ಇದ್ದ ಕಡೆ ಕಿಟಕಿ, ಬಾಗಿಲು ಮತ್ತು ನೀರು ಇರುವುದಿಲ್ಲ. ನೀವು ನೋಡಿರುವ ಹಾಗೆ ವಿಧಾನಸೌಧದ ಸುತ್ತ ಸುಮಾರು 3 ರಿಂದ 4 ಕಿಮೀನಲ್ಲಿ ಎಲ್ಲಿಯೂ ಕುಡಿಯುವ ನೀರಾಗಲಿ ಅಥವಾ ಶೌಚಾಲಯಗಳಾಗಲಿ ಇಲ್ಲ. ಎಲ್ಲಿಯೂ ಸಾರ್ವಜನಿಕರಿಗೆ ತಿಳಿಹೇಳುವ ನಾಮಫಲಕಗಳಿಲ್ಲ. ಕಸವನ್ನು ಹಾಕುವುದಕ್ಕಾಗಿ 'ಕಸದ ಬುಟ್ಟಿ' (ಡಸ್ಟ್ ಬಿನ್) ಗಳನ್ನು ಇಡಬೇಕಿದೆ. ರಾಜ್ಯದ ರಾಜಧಾನಿಯಲ್ಲೇ ಈ ಪರಿಸ್ಥಿತಿ ಆದರೆ ಇನ್ನು ಹಳ್ಳಿಗಳ ಪಾಡೇನು?. ಮೊದಲಿಗೆ ಕಸವನ್ನು ಹಾಕಲು ಅಲ್ಲಲ್ಲಿ ನಿಗದಿ ಪಡಿಸಿದ ಕಸದ ಡಬಗಳಿರುತ್ತಿದ್ದವು. ಈಗ ಅವುಗಳೂ ಇಲ್ಲ. ಅದರ ಬದಲಿಗೆ ಪಾಲಿಕೆಯವರು ಪಾದಚಾರಿಗಳು ನಡೆದರೆ ಜಾರಿ ಬೀಳುವ ಸೊಗಸಾದ ನುಣುಪು ಕಲ್ಲುಗಳನ್ನು ಹಾಕಿಸುತ್ತಿದ್ದಾರೆ. ಇನ್ನು ಮಳೆಯ ನೀರನ್ನು ಭೂಮಿಯು ಹೀರಿಕೊಳ್ಳುವುದು ಹೇಗೆ?

ನಾವುಗಳೂ ಕಾಂಕ್ರೀಟ್ ಜಂಗಲ್‌ನಲ್ಲಿ ಬದುಕುತ್ತಿದ್ದೇವೆ, ನಿಜವಾಗಲು ನಮ್ಮ ದೇಶದ ಸ್ವಚ್ಛತೆಯ ಬಗ್ಗೆ ಅಲ್ಪ ಸ್ವಲ್ಪವಾದರೂ ಕಾಳಜಿ ಇದ್ದರೆ ಮೊದಲಿಗೆ ನಮ್ಮ ಮಕ್ಕಳಿಗೆ ತಿಳುವಳಿಕೆ ಹಾಗೂ ಅದರ ಬಗ್ಗೆ ಅರಿವು ಮೂಡಿಸಬೇಕು. ಶಾಲೆಗಳಲ್ಲಿ ಶುಚಿತ್ವ ಕಲಿಸಲು ಕಡ್ಡಾಯವಾಗಿ ವಾರದಲ್ಲಿ ಒಂದು ತರಗತಿಯನ್ನು ಮೀಸಲಿಡಬೇಕು. ಅನಿವಾಸಿ ಭಾರತೀಯರು ತಮ್ಮ ದೇಶದ ಬಗ್ಗೆ ಕೀಳರಿಮೆಯ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕು. ನಾವುಗಳೂ ಸಹ ನಮ್ಮ ನಮ್ಮ ರಸ್ತೆಗಳನ್ನು ವಾರಕ್ಕೆ ಒಮ್ಮೆಯಾದರೂ ಎಲ್ಲಾರೂ ಕೂಡಿ ಸ್ವಚ್ಛ ಮಾಡೋಣ ಎಂದು ಸಂಕಲ್ಪ ಮಾಡಿಕೊಳ್ಳಬೇಕು. ಪ್ಲಾಸ್ಟಿಕ್ ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಬೇಕು. ಸಾಮಾಜಿಕ, ಧಾರ್ಮಿಕ ಸಮಾರಂಭಗಳಲ್ಲಿ, ಸಂಘ ಸಂಸ್ಥೆಗಳ ಸಭೆಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ಶೇಖರಿಸಲು ಕಸದ ಬುಟ್ಟಿಗಳನ್ನು ಇಡಬೇಕು. ಸ್ವಚ್ಛತೆಯ ಬಗ್ಗೆ ಹೆಚ್ಚಿನ ರೀತಿಯಲ್ಲಿ ತಿಳುವಳಿಕೆ ಪತ್ರಗಳನ್ನು ಹಂಚಬೇಕು. ಹಣ್ಣು ಹಾಗೂ ತರಕಾರಿ ಮಾರುಕಟ್ಟೆಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ವ್ಯಾಪಾರಿಗಳು ಮತ್ತು ಗ್ರಾಹಕರು ಕೈಗೂಡಿಸಬೇಕು. ಒಂದು ಸಂತೋಷದ ವಿಷಯವೇನೆಂದರೆ ಪ್ರಧಾನ ಮಂತ್ರಿಗಳ ಈ ಮಹತ್ಕಾರ್ಯಕ್ಕೆ ರಾಜಕೀಯ ಬಣ್ಣವನ್ನು ಲೇಪಿಸದೆ, ಕೆಲವು NRIಗಳು, ಯೂತ್ ಫಾರ್ ಪರಿವರ್ತನ್ ಅಂತಹ NRIಗಳು, ಬಹುರಾಷ್ಟ್ರೀಯ ಕಂಪನಿಗಳು, ಪ್ರಸಿದ್ಧ ವ್ಯಕ್ತಿಗಳು, ಚಿತ್ರ ತಾರೆಗಳು, ಉನ್ನತ ಕೀಡಾಪಟುಗಳೂ, ಮತ್ತು ಉದ್ದಿಮೆದಾರರು ಬೆಂಬಲ ನೀಡಿದ್ದಾರೆ.

ನಾವೆಲ್ಲಾ ಭಾರತಿಯರು ಸೇರಿ ಸ್ವಚ್ಛತೆಗಾಗಿ ಶ್ರಮಿಸಿ ನಮ್ಮ ದೇಶಕ್ಕೆ ಸೇವೆ ಸಲ್ಲಿಸೋಣ. ಅದೇ ಸ್ವಚ್ಛತೆಯನ್ನು ಉಳಿಸಿಕೊಳ್ಳಲು ಉತ್ತಮ ಮಾರ್ಗ.

**ಟಿ.ಎಸ್. ನಾಗೇಶ್**

## ನಮ್ಮನ್ನಗಲಿದ ನಮ್ಮವರು-ಸಂಘದ ಶ್ರದ್ಧಾಂಜಲಿ

**26.2.15** ಪ್ರವೀಣ್, ಶ್ರೀಚೂಡಸಂದ್ರ ನಾಗರಾಜ್ ಮತ್ತು ಶ್ರೀಮತಿ ಮೀನಾಕ್ಷಮ್ಮನವರ ಪುತ್ರ (34)

**27.2.15** ಕೊತ್ತನೂರು ಸರಸಮ್ಮ, ಶ್ರೀ ಗಣೇಶರವರ ಮಾತೃಶ್ರೀ (94)

**27.2.15** ಮಂಜುಳ, ಶ್ರೀ ಶ್ಯಾಮ ಪ್ರಸಾದ್‌ರವರ ಮಾತೃಶ್ರೀ (67)

**01.03.15** ಶಿಡ್ಲಘಟ್ಟ ವೆಂಕಟರಾಮನ್ (80)

**31.1.15** ಕಲಾವಿದ ವೆಂಕಟಾದ್ರಿ, ಶ್ರೀ ಸುಬ್ಬರಾವ್‌ರವರ ಪುತ್ರ (58)

**05.02.15** ಅಟ್ಟೂರು ಸುಬ್ರಮಣ್ಯ ಶರ್ಮ (74)

**05.02.15** ಶಾಂತ ಸದಸ್ಯ ಆರ್.ಎಸ್.ರವಿಕುಮಾರ್, ಆರ್.ಎಸ್. ರಮೇಶ್ ರವರ ಮಾತೃಶ್ರೀ 77

**04.02.15** ಬೆಟ್ಟಕೋಟೆ ಈಶ್ವರ ಮೂರ್ತಿ (78)

**13.03.2015** ತಟ್ಟನ ಹಳ್ಳಿ ಸುದರ್ಶನ್ ರಾವ್, ಶ್ರೀ ತಟ್ಟನಹಳ್ಳಿ ನಂಜುಂಡಮ್ಮನವರ ಮಗ (55)


**10.03.15.** 'ಹಿರಿಯ ಚೇತನ' ದೊಮ್ಮಸಂದ್ರ ಎಸ್. ವೆಂಕಟರಾಮ ಐಯ್ಯರ್ 82 (ಸದಸ್ಯ ಶ್ರೀ ಶಿವ ಪ್ರಸಾದ್ ತಂದೆ)

**20.3.2015,** ಡಿ.ಎನ್. ಶ್ರೀನಿವಾಸ್ 'ಹಿರಿಯ ಚೇತನ' ಡಿ.ವಿ. ನಟರಾಜ್‌ರವರ ಪುತ್ರ (66)


**21.3.2015,** ನಾಗರಾಜ್ 'ಹಿರಿಯ ಚೇತನ', ಶ್ರೀಮತಿ ಶಾರದಮ್ಮ ವೆಂಕಟೇಶ್ ರವರ ಅಳಿಯ (70)

**23.3.2015,** ಪ್ರಕಾಶ್ ಡಿ.ವಿ. ಹಿರಿಯ ಚೇತನ ಡಿ.ವಿ.ನಟರಾಜ್ ಸೋದರ

## ರಂಗೋಲಿ



15.1



15.3.3

■ ವಿದ್ಯಾ ಕೆ. ಅರಿಶಿನಕುಂಟೆ, ನೆಲಮಂಗಲ



## ``Three Ships''

"ಈ ಸಂಸಾರ ಸಾಗರದಲ್ಲಿ ನಮ್ಮ ಜೀವನ ಪಯಣ ಯಾವಾಗಲೂ ಎರಡು Shipಗಳ ನಡುವೆಯೇ ಸಾಗುತ್ತಿರುತ್ತದೆ. ಒಂದು ಕಡೆ Relation Ship ಮತ್ತೊಂದು ಕಡೆ Friend Ship ಈ ಎರಡು Shipಗಳ ನಡುವಿನ ಪಯಣ ಸಾಗಿ ದಡ ತಲುಪಿ ಗುರಿ ಮುಟ್ಟಬೇಕಾದರೆ Relation Ship ಮತ್ತು Friend Shipಗಳಲ್ಲದೆ ಇನ್ನೂ ಒಂದು Shipನ ಆಸರೆ ಎಲ್ಲರಿಗೂ ಬೇಕೇಬೇಕು. ಆ ಮೂರನೇ Ship, Worship ಅಂದರೆ "ಭಕ್ತಿ" ಭಕ್ತಿ ಮತ್ತು ಹಾಸ್ಯ ಮನೋಭಾವ ಸುಖ ಜೀವನಕ್ಕೆ ಅತ್ಯವಶ್ಯಕ."

**ಹೆಚ್.ಪಿ. ರಾಮಕೃಷ್ಣ (ಕಿಟ್ಟಿ)**

## ಕನಸಿನ ಸೊಗಸು

ನನ್ನ ಕನಸು, ನನಸಾಗದೆ ಉಳಿದಿದೆ ಇಂದು,
ನನಸಾಗದೆ ಉಳಿದ ಕನಸೇ ಸೊಗಸು ಅಂದು
ಸವಿಗನಸ ನೆನವ ದಿನವೇ ಸಿಹಿ ಎಂದೆಂದೂ

## ಅಮ್ಮ ನಾಮ ಹಲವು

ದೇವಿಯೋರ್ವಳ ನಾಮ ಹಲವು
ಮದುರೆಯಲಿ ಮೀನಾಕ್ಷಿಯಾಗಿಹೆ
ಕಂಚಿಯಲಿ ಕಾಮಾಕ್ಷಿಯಾಗಿಹೆ
ಕಾಶಿಯಲಿ ವಿಶಾಲಾಕ್ಷಿಯಾಗಿಹೆ
ಕಮಲದಲಿ ಸರಸಿಜಾಕ್ಷಿಯಾಗಿಹೆ
ಜಿಂಕೆ ಕಣ್ಗಳ ಹೊತ್ತು ಹರಿಣಾಕ್ಷಿಯಾಗಿಹೆ
ಹೇ ನಳಿನಾಕ್ಷಿ ಕಂಜದಳಾಕ್ಷಿ ಇನ್ನು
ಎಷ್ಟು ನಾಮಗಳಿಹೆ ನಿನಗೆ

■ **ಕೆ.ಎಲ್. ಶಾಂತ**

## ಕಲಿಯಬೇಕು

ಬೇಸಿಗೆಯ ಬಿಸಿಲು ಮಧ್ಯಾಹ್ನದಲಿ
ಮಡದಿ ಹಾಕಿದ ಸಂಡಿಗೆಯನು
ಒಣಗಿಸಲು ಆಗಿದ್ದೆ ನಾನದರ
ಕಾವಲುಗಾರ ಕಾಗೆಗಳೆರಡು ಬಂದು
ಕಾಡಲು "ಹುಷ್, ಹುಷ್" ಎನ್ನುತ್ತಾ ನನ್ನ
ಕಣ್ಣನು ಕೆಕ್ಕರಿಸಲು, ನನ್ನೀಭಾಷೆ
ಅರ್ಥವಾದಂತೆ ಹಾರಿ ಹೋದವು.
ಇದರ ಕಾಟ ಅತಿಯೆಂದು ಮಲಗಲು
"ಬಿಡ್ರಿ, ಅವೇನು ಮಾಡುತ್ತೆ ನಿಮಗೆ"
ಎಂದು ಮಾಡಿದಳು, ಮಡದಿಯದರ ವಕೀಲಿ
ಸಂಜೆ ಮಡದಿಯೊಂದಿಗೆ ಸುಂದರ ಉಡುಪು
ತೊಟ್ಟು ಸಮಾರಂಭವೊಂದಕ್ಕೆ ತಯಾರಾಗಲು
ಕಾಗೆಯೊಂದು ಒಂದು ಶುಭಾಂಗಿಯ ಮೇಲೆ ಹೇಸಿಗೆ ಮಾಡಿ
ಮರದ ಮೇಗಡೆ ಕುಳಿತು, ಪಿಳಿ ಪಿಳಿ ನೋಡುತ
ನನ್ನಡುಪನು ಬದಲಿಸುವಂತೆ ಮಾಡಿದವು.
ನನ್ನೀ ಪೇಚಿಗೆ ಮಡದಿಯಿಂ ಕೀಟಲೆಯ
ಸಾಂತ್ವನ ದೊರೆತು ರೇಗಿತು ಮತ್ತೆ ನನಗೆ
ಕಲಿಯಲೇಬೇಕು ಕಾಗೆಗಳ ಮಾತುಗಳನು
ಇಲ್ಲದಿರೆ ಚಳ್ಳೇಹಣ್ಣು ಗ್ಯಾರಂಟಿ ನನಗೆ

**ಜಿ. ಎಸ್. ಸತ್ಯಮೂರ್ತಿ**

## ಸೂಚನೆ

ಸಂಘದ ಸದಸ್ಯರ ಸಲಹೆಯಂತೆ ಚಂದಾಪುರದ ಕೆನರಾ ಬ್ಯಾಂಕ್‌ನಲ್ಲಿ ಹೊಸ ಖಾತೆಯನ್ನು ದಾನಿಗಳೂ, ಪ್ರಾಯೋಜಕರು, ಸದಸ್ಯರು ದೇಣಿಗೆ ಪಾವತಿಸಲು ತೆರೆದಿದೆ.

ವಿವರ : ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ, ಖಾತೆ ಸಂಖ್ಯೆ : 1065101119457, IFS Code : CNRB 0001065

**ಅಧ್ಯಕ್ಷರು**

## ಸುದ್ದಿಚಿತ್ರ



ಕೃಷ್ಣರಾಜಪುರದ 'ಹರಿದಾಸ ಮಹಿಳಾ ಸಂಘ'ದವರಿಂದ ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ ಸಮೂಹ ಗಾಯನ.



ಸಂಘದ ಸದಸ್ಯ ಶ್ರೀ ಪ್ರಶಾಂತ್‌ರವರ ತಬಲ, ಪಕ್ಕವಾದ್ಯ ಸಾತ್, ವಿದ್ವಾನ್ ಶ್ರೀಮತಿ ಸೌಮ್ಯ ಶರ್ಮಾ ಅವರೊಂದಿಗೆ ರೋಟರಿ ಕ್ಲಬ್ ವಾರ್ಷಿಕೋತ್ಸವದ ಸಂಗೀತ ಕಚೇರಿಯಲ್ಲಿ.



**2015ರ ನಾಗಾರಾಧನಾ ಸಂದರ್ಭದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಸ್ವಯಂ ಸೇವಕರು**



# ಸತ್ಸಂಗ

ಈ ಮಾತು ಶ್ರೀಕೃಷ್ಣನು ಅಕ್ರೂರನಿಗೆ ಹೇಳಿದುದು:

ಶ್ರೇಯಃ ಸ್ಕಾಮರಾದಿ ಮನುಷ್ಯರು ನಿಮ್ಮಂತಹ ಪೂಜ್ಯರಾದ, ಮಹಾ ಭಾಗ್ಯಶಾಲಿಗಳಾದ ಸಂತರ ಸೇವೆಯನ್ನು ಸದಾ ಮಾಡುತ್ತಿರಬೇಕು. ಪದಾರ್ಥವನ್ನೆ ಪ್ರಯೋಜನವನ್ನಾಗಿ ಹೊಂದಿರುವ ಸತ್ಪುರುಷರು ಸ್ವಾರ್ಥಿಗಳಾದ ದೇವತೆಗಳಿಗಿಂತಲೂ ಶ್ರೇಷ್ಠರು. ಒಂದು ವೇಳೆ ನೀರು ತುಂಬಿರುವ ಕೊಳವನ್ನು ತೀರ್ಥವೆಂದು ಭಾವಿಸಿದರೂ, ಮೃಣ್ಮಯವಾದ ಮತ್ತು ಶಿಲಾಮಯವಾದ ವಿಗ್ರಹವನ್ನು ದೇವತೆಯೆಂದು ಭಾವಿಸಿದರೂ ಅವುಗಳು ಫಲ ಕೊಡುವುದು ಹಲವಾರು ವರ್ಷಗಳು ಶ್ರದ್ಧೆಯಿಂದ ಸೇವೆ ಮಾಡಿದ ನಂತರವೇ. ಆದರೆ ಸತ್ಪುರುಷರಾದರೋ, ದರ್ಶನ ಮಾತ್ರದಿಂದಲೇ ಒಡನೆಯೇ ಫಲವನ್ನು ಪಾವನಗೊಳಿಸುತ್ತಾರೆ. ಅಕ್ರೂರನು ಶ್ರೀ ಕೃಷ್ಣನ ಪರಮ ಭಕ್ತ.

ಶ್ರೀ ಮದ್ಭಾಗವತ 7ನೆಯ ಸಂಪುಟ, ದಶಮಸ್ಕಂಧ ಪೂರ್ವಾರ್ಧ, 48ನೇ ಅಧ್ಯಾಯ. 2530ನೇ ಪುಟ, ಸತ್ಸಂಗ, ಸತ್ಪುರುಷ ಮಹಿಮೆ.

* * *

ಇದು ಭಕ್ತನಾದ ಮುಚುಕುಂದನು ಶ್ರೀಕೃಷ್ಣನಿಗೆ ಹೇಳಿದುದು:

ಅಚ್ಯುತನೇ! ಜೀವವು ಅನಾದಿಕಾಲದಿಂದಲೂ ಹುಟ್ಟು-ಸಾವುಗಳೆಂಬ ಸಂಸಾರ ಚಕ್ರದಲ್ಲಿ ಸಿಕ್ಕಿ ಸುತ್ತುತ್ತಲೇ ಇದೆ. ಸಂಸಾರ ಚಕ್ರದಿಂದ ಬಿಡುಗಡೆಯಾಗುವ ಕಾಲವು ಹತ್ತಿರ ಬಂದೊಡನೆಯೇ ಆ ಜೀವಿಗೆ ಸತ್ಪುರುಷರೊಡನೆ ಸಮಾಗಮವಾಗುತ್ತದೆ. ಸತ್ಸಂಗವಾದೊಡನೆ ಕಾರ್ಯಕಾರಣ ರೂಪನಾದ ಜಗತ್ತಿಗೆ ಏಕಮಾತ್ರ ಸ್ವಾಮಿಯಾದ, ಸತ್ಪುರುಷರಿಗೆ ಪರಮಾಶ್ರಯನಾದ ನಿನ್ನನ್ನು ಸೇವೆ ಮಾಡಬೇಕೆಂಬ ಬುದ್ಧಿಯು ಆ ಜೀವನಿಗೆ ಉಂಟಾಗುತ್ತದೆ.

ಶ್ರೀ ಶಂಕರಾಚಾರ್ಯರು ಕೂಡ ಭಜಗೋವಿಂದ ಸ್ತೋತ್ರದಲ್ಲಿ ಸತ್ಪುರುಷರ ಸತ್ಸಂಗದ ಮಹಿಮೆಯನ್ನು ಹೇಳಿರುತ್ತಾರೆ.

ಸತ್ಸಂಙ್ಗತ್ವೇ ನಿಃಸಙ್ಗತ್ವಂ ನಿಸಙ್ಗತ್ವೇ (ನಿರ್ಮೋಃತ್ವಂ) ನಿರ್ಮೋಹತ್ವಂ!

ನಿರ್ಮೋಹತ್ವೇ ನಿಶ್ಚಲತತ್ವಂ ನಿಶ್ಚಲತತ್ವೇ ಜೀವನ್ಮುಕ್ತಿಃ ॥

ಸತ್ಸಂಗದಿಂದ ನಿಃಸ್ಸಂಗವಾಗುತ್ತದೆ. ಪ್ರಾಪಂಚಿಕ ಸುಖೋಪಭೋಗಗಳ ಕಡೆಗೆ ಮನಸ್ಸು ಹೋಗುವುದಿಲ್ಲ. ನಿಃಸ್ಸಂಗದಿಂದ ಸಂಸಾರದ ಮೇಲಿನ ವ್ಯಾಮೋಹವು ಕಡಿದು ಹೋಗುತ್ತದೆ. ನಿರ್ಮೋಹತ್ವದಿಂದ ನಿಶ್ಚಲವಾದ ಆತ್ಮತತ್ವವು ತಿಳಿಯುತ್ತದೆ. ಆತ್ಮತತ್ವವನ್ನು ತಿಳಿಯುವುದರಿಂದ ಜೀವನ್ಮುಕ್ತಿಯಾಗುತ್ತದೆ.

ಶ್ರೀಮದ್ಭಾಗವತ 7ನೆಯ ಸಂಪುಟ ದಶಮಸ್ಕಂಧ ಉತ್ತರಾರ್ಧ 51ನೇ ಅಧ್ಯಾಯ.

**ಉಮಾ ಶಶಿಧರಕೃಷ್ಣ**
ಕಿತ್ತಿಗಾನಹಳ್ಳಿ

# ಸುಶೀಲಧಾಮಕ್ಕೆ ಒಂದು ಸ್ಮರಣೀಯ ಭೇಟಿ



ಈಚೆಗೆ ಒಂದು ಭಾನುವಾರ ಬೃಹಚ್ಚರಣ ಸಂಘದ ಕಾರ್ಯಕಾರಿ ಸಮಿತಿಯ ಮಾಸಿಕ ಸಭೆ ಸೇರಿದುದು ಹೊಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ಸುಮಾರು 20 ಕಿ.ಮಿ. ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಿಂದ 5 ಕಿ.ಮೀ. ದೂರದ ಅತ್ತಿಬೆಲೆಯಲ್ಲಿರುವ ಜೈನ ಮತಸ್ಥರ ಸುಶೀಲಧಾಮದಲ್ಲಿ.

ಸುಶೀಲಧಾಮವು ಸಕಲ ಧರ್ಮದವರೂ ಭೇಟಿ ನೀಡಲು ಅಪೇಕ್ಷಿಸುವ ಶಾಂತಿಪೂರ್ಣ ಪವಿತ್ರ ಸ್ಥಳ. ಈ ಮಂದಿರವನ್ನು ಜೈನರ ಸಂತ ಸುಶೀಲ್ ಸುರಿ ಜೀ ಅವರ ಸ್ಮರಣಾರ್ಥವಾಗಿ ನಿರ್ಮಿಸಲಾಗಿದೆ. ಹೊಸೂರು ರಸ್ತೆಯಲ್ಲಿ ಪಯಣಿಸಿ ಬೊಮ್ಮಸಂದ್ರ ದಾಟಿದ ನಂತರ ಎಡಕ್ಕೆ ತಿರುಗಿದಲ್ಲಿ ಸಿಗುವ ಜಿನಮಂದಿರ ಸಂಕೀರ್ಣ ಇದು. ನಗರದಿಂದ ಇಲ್ಲಿಗೆ ತಲುಪಲು ಸಾರಿಗೆ ಬಸ್ ಅನುಕೂಲವುಂಟು (ಮಾರ್ಗ ಸಂಖ್ಯೆ 360)

ಆವರಣದೊಳಗೆ ಕಾಲಿಡುತ್ತಿದ್ದಂತೆಯೇ ನಮ್ಮನ್ನಾಕರ್ಷಿಸಿದ್ದು ಈ ಸ್ಥಳದ ವೈಶಾಲ್ಯತೆ. ಮೂಲಸ್ಥಾನದಲ್ಲಿರುವುದು ಜೈನ ತೀರ್ಥಂಕರ ಪಾರ್ಶ್ವನಾಥ ಭಗವಾನರ ಮಂದಿರ. ಇದಲ್ಲದೇ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಧರ್ಮಶಾಲೆ, ಭೋಜನ ಶಾಲೆ ಹಾಗೂ ಮಕ್ಕಳಿಗಾಗಿ ಆಟದಂಗಣವೂ ಉಂಟು. ಹಾಲುಗಲ್ಲಿನಿಂದ ನಿರ್ಮಿತವಾದ ಪಾರ್ಶ್ವನಾಥ ಮಂದಿರದ ಒಳಭಾಗವು ಸುಂದರ ಶಿಲ್ಪ ಕಲಾಕೃತಿಗಳಿಂದ ಕಂಗೊಳಿಸುತ್ತಿದೆ. ಮುಖ್ಯ ಸಭಾಂಗಣದಲ್ಲಿ ಭಗವಾನ್ ಪಾರ್ಶ್ವನಾಥರ ಮೂರ್ತಿಯಲ್ಲದೆ ಜೈನ ಮತದ ವಿವಿಧ ಮೂರ್ತಿಗಳನ್ನೂ ಪ್ರತಿಷ್ಠಾಪಿಸಲಾಗಿದೆ. ವನರಾಜಿಯ ನಡುವೆ ಹರಡಿಕೊಂಡಿರುವ ಇಡೀ ಕ್ಷೇತ್ರವನ್ನು ಶಾಂತ, ನಿರ್ಮಲ ವಾತಾವರಣದಲ್ಲಿ ಚೊಕ್ಕಟವಾಗಿ ಇಟ್ಟುಕೊಳ್ಳಲಾಗಿದೆ.

ಸುಡುವ ಬಿಸಿಲಿನಲ್ಲಿ ಬರಿಗಾಲಿನಲ್ಲಿ ನಡೆಯುತ್ತಾ ಭೋಜನ ಶಾಲೆಯನ್ನು ತಲುಪಿದ್ದಾಯಿತು. ಅಲ್ಲಿ ದೇಹಶ್ರಮವನ್ನು ಮರೆಸುವಂಥ ರುಚಿಕರ, ಸಾತ್ವಿಕ ಭೋಜನವನ್ನು ಸವಿದೆವು.

ಪೇಟೆಯ ಗೌಜಿನಿಂದ ದೂರದಲ್ಲಿ ಸ್ಥಾಪನೆಗೊಂಡಿರುವ ಜೈನ ಮತಸ್ಥರ ಪವಿತ್ರಸ್ಥಾನವಾದ ಈ ಸುಶೀಲಧಾಮವು ಸರ್ವ ಮತಸ್ಥರೂ ನೋಡಲೇಬೇಕಾದ ಜಾಗ. ವಾರಾಂತ್ಯದಲ್ಲಿ ಭೇಟಿ ನೀಡಲು ಇದು ಸೂಕ್ತ ಸ್ಥಳ. ಧರ್ಮಶಾಲೆಯಲ್ಲಿ ಒಂದು ದಿನಕ್ಕೂ ಹೆಚ್ಚು ಕಾಲ ಉಳಿದುಕೊಳ್ಳಬಹುದು. ಕೋಣೆಗಳನ್ನು ಮುಂಗಡವಾಗಿ ಕಾದಿರಿಸುವ ಸೌಲಭ್ಯ ಉಂಟು. ಸಮಿತಿಯ ಸಭೆಯನ್ನು ಮುಗಿಸಿಕೊಂಡು ಬರುವಾಗ ಇನ್ನೊಮ್ಮೆ ಆ ಸ್ಥಳಕ್ಕೆ ಕುಟುಂಬದವರೊಂದಿಗೆ ಭೇಟಿ ನೀಡಬೇಕೆಂದುಕೊಂಡು ಮರಳಿದೆವು.

**ಹೆಚ್.ಕೆ. ಶಶಿಧರ್**



## ಅಡುಗೆ ಕಟ್ಟೆ

### ಹಸಿ ಮೆಣಸಿನಕಾಯಿ ಗೊಜ್ಜು

**ಬೇಕಾಗುವ ಪದಾರ್ಥಗಳು**

5ರಿಂದ 6 ಹಸಿ ಮೆಣಸಿನ ಕಾಯಿ, ಹುಣಸೆ ಹಣ್ಣು, ರುಚಿಗೆ ತಕ್ಕಷ್ಟು ಉಪ್ಪು, ಸಾರಿನ ಪುಡಿ ಸ್ವಲ್ಪ, ಅರಿಶಿನ ಚಿಟಿಕೆ, ಬೆಲ್ಲ ಸ್ವಲ್ಪ, ಎಳ್ಳುಪುಡಿ, (ಎಳ್ಳು, ಜೀರಿಗೆ, ಮೆಂತ್ಯ) ಇವುಗಳೆಲ್ಲದರ ಹುರಿದ ಪುಡಿ.

**ಮಾಡುವ ವಿಧಾನ**

ಮೊದಲು ಮೆಣಸಿನಕಾಯಿಯನ್ನು ಸಣ್ಣದಾಗಿ ಸೀಳಿಕೊಳ್ಳಿ. ಒಲೆಯ ಮೇಲೆ ಬಾಣಲೆ ಇಟ್ಟು, ಸ್ವಲ್ಪ ಎಣ್ಣೆ ಹಾಕಿ. ಕಾದ ಎಣ್ಣೆಗೆ ಸಾಸಿವೆ ಹಾಕಿ, ಸಾಸಿವೆ ಸಿಡಿದ ಮೇಲೆ, ಸೀಳಿದ ಹಸಿ ಮೆಣಸಿನಕಾಯಿ ಹಾಕಿ ಸ್ವಲ್ಪ ಹುರಿದು ನಂತರ ಅರಿಶಿನ ಹಾಕಿ. ನಂತರ ಹುಣಸೆರಸ, ಬೆಲ್ಲ, ಸಾರಿನ ಪುಡಿ ಹಾಕಿ ಕುದಿಯಲು ಬಿಡಿ. ಚೆನ್ನಾಗಿ ಕುದ್ದ ನಂತರ ಕೊನೆಯಲ್ಲಿ ಹುರಿದ ಎಳ್ಳುಪುಡಿಯನ್ನು ಹಾಕಿ ಕುದಿಸಿದರೆ ಹಸಿ ಮೆಣಸಿನ ಕಾಯಿಯ ಗೊಜ್ಜು ತಯಾರು. ಪೊಂಗಲ್ ಜೊತೆ ತಿನ್ನಲು ಇದು ಬಹು ರುಚಿ.

### ಬೆಂಡೆಕಾಯಿ ಬಜ್ಜಿ

**ಬೇಕಾಗುವ ಪದಾರ್ಥ** : ಕೈ ಬೆರಳಿನಷ್ಟುದ್ದ ಹೆಚ್ಚಿ, ಸೀಳಲ್ಪಟ್ಟ ಬೆಂಡೆಕಾಯಿಗಳು, ಹುಣಸೆ ರಸ, ಕಡಲೆ ಹಿಟ್ಟು, ಅಚ್ಚ ಖಾರದ ಪುಡಿ (ಅಚ್ಚ ಮೆಣಸಿನ ಪುಡಿ), ಅಡುಗೆ ಸೋಡ, ಉಪ್ಪು ರುಚಿಗೆ ತಕ್ಕಷ್ಟು.

**ಮಾಡುವ ವಿಧಾನ** : ಹೆಚ್ಚಿ ಸೀಳಲ್ಪಟ್ಟ ಬೆಂಡೆಕಾಯಿಗಳನ್ನು 10–15 ನಿಮಿಷಗಳು ಹುಣಸೆ ನೀರಿನಲ್ಲಿ ನೆನೆಸಬೇಕು.

ನಂತರ ಬೇರೆ ಪಾತ್ರೆಯಲ್ಲಿ ಕಡಲೆಹಿಟ್ಟು, ಸ್ವಲ್ಪ ಅಕ್ಕಿ ಹಿಟ್ಟು, ಅಚ್ಚ ಮೆಣಸಿನಪುಡಿ, ಸ್ವಲ್ಪ ಅಡುಗೆ ಸೋಡ, ರುಚಿಗೆ ತಕ್ಕಂತೆ ಉಪ್ಪು ಸೇರಿಸಿ, ನೀರಿನಲ್ಲಿ ಕಲಸಿಟ್ಟುಕೊಂಡು, ನೆನೆಸಿಟ್ಟುಕೊಂಡ ಬೆಂಡೆಕಾಯಿ ತುಂಡುಗಳನ್ನು ಕಡಲೆಹಿಟ್ಟಿನ ಮಿಶ್ರಣದಲ್ಲಿ ಅದ್ದಿ, ಕಾದ ಎಣ್ಣೆಯಲ್ಲಿ ಹಾಕಿ ಕರಿದರೆ ಬೆಂಡೆಕಾಯಿ ಬಜ್ಜಿ ತಿನ್ನಲು ತಯಾರು !

**ಸರಸ್ವತಿ ನಟರಾಜ್**

## ಸೂಚನೆ


ಮಾನ್ಯ ಸದಸ್ಯರಿಗೆ

ತಮ್ಮ ಮಗ/ಮಗಳು 2014–15ನೇ ಸಾಲಿನಲ್ಲಿ ನಡೆದ 10ನೇ ತರಗತಿ, ದ್ವಿತೀಯ ಪಿಯುಸಿ, ಯಾವುದೇ ಪದವಿ ಶಿಕ್ಷಣದಲ್ಲಿ ಶೇ. 60ಕ್ಕೂ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆಯಾಗಿದ್ದಲ್ಲಿ, ಅವರಿಗೊಂದು ನೆನಪಿನ ಕಾಣಿಕೆ ನೀಡಿ ಶುಭ ಹಾರೈಸಲು ಸಂಘವು ತೀರ್ಮಾನಿಸಿದೆ. ತಾವು ಫಲಿತಾಂಶ, ಬಂದ ನಂತರ ವಿವರಗಳನ್ನು ದಾಖಲೆ ಸಹಿತ ಸಂಘಕ್ಕೆ ಕಳುಹಿಸುವುದು.

ಪ್ರಶಸ್ತಿ ಪುರಸ್ಕಾರಗಳನ್ನು ದಿನಾಂಕ 05ನೇ ಜುಲೈ 2015ರಂದು ಬೆಂಗಳೂರಿನ ಬಸವನಗುಡಿ ಕುಕ್ಕೆ ಸುಬ್ರಹ್ಮಣ್ಯ ಮಠದಲ್ಲಿ ನಡೆಯಲಿರುವ **'ಸರ್ವ ಸದಸ್ಯರ ಸಭೆ'** ಹಾಗೂ **'ಹಿರಿಯ ಚೇತನ'**ರಿಗೆ ಗೌರವ ಸಮಾರಂಭದಲ್ಲಿ **'ಪ್ರತಿಭಾ ಪುರಸ್ಕಾರ'**ವನ್ನು ನಡೆಸಲು ತೀರ್ಮಾನಿಸಲಾಗಿದೆ. ತಾವು ತಮ್ಮ ಕುಟುಂಬದ ಸದಸ್ಯರೊಂದಿಗೆ ಭಾಗವಹಿಸಲು ಕೋರಿದೆ.

ಕಾರ್ಯಕ್ರಮದ ಪ್ರಾಯೋಜಕರಿಗೆ ಆಹ್ವಾನ.

**ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು**



### ಎಡದಿಂದ ಬಲಕ್ಕೆ

1. ನರದೊಳಗಿರುವ ಪಟ್ಟಣ (3)
2. ಬೇಡವಾದ ವಸ್ತು (ತ್ಯಾಜ್ಯ) (2)
3. ಬಾಣ ತಲುಪಬೇಕಾದ ಜಾಗ (2)
4. ನಮ್ಮವರು ನೆಲೆಸಿದ್ದ ತಮಿಳುನಾಡಿನ ಊರು (5)
5. ವನದೊಳಗಿರುವ ಬಟ್ಟೆ (3)
6. ಲೆಕ್ಕ ಶಾಸ್ತ್ರ (3)

### ಮೇಲಿನಿಂದ ಕೆಳಕ್ಕೆ

7. ಸ್ವರ್ಗ (2)
8. ಪ್ರಥಮ ಪೂಜಿತ ದೇವ (4)
9. ಇದು ತಪ್ಪಲ್ಲ (2)
10. ಮಂಜನು ಮಾಡಿದ್ದು (ಹೇಳಿದ್ದು) ಸರಿಯಾಗಿದೆ (4)
3. ಗುರುಗಳ ಮಾತು (4)

### ಹತ್ತು ವ್ಯತ್ಯಾಸಗಳು : ಉತ್ತರ

1. ಇಲಿ
2. ಪುಸ್ತಕದ ಮೇಲಿನ ಹೂವು
3. ಹಾರದ ತುದಿ ಗೊಂಚಲು
4. ಆನೆ ಸೊಂಡಿಲ ದೀಪ
5. ಲಾಡು
6. ಪ್ರಭಾವಳಿ
7. ಕಿರೀಟದ ಕುಚ್ಚು
8. ತಿಲಕ
9. ಗಣೇಶನ ಸೊಂಡಿಲ ಮೇಲಿನ ಚಿತ್ತಾರ
10 ದಂತ

*If un Delivered please return to :*

*President*

**'Brihacharana Sangha'** No. 8, 3rd Cross, Annaiyyappa Blo
Kumarapark West, Bengaluru-560 020.

## ಓದುಗರ ಪತ್ರಗಳು



ಮಾನ್ಯ ಎಸ್ಸೆನ್ಕೆಯವರಿಗೆ ನಮಸ್ಕಾರ.

ತಮ್ಮ ಪತ್ರ 23.2.2015ರೊಂದಿಗೆ ವ್ಯಕ್ತಿ ಚಿತ್ರ ಶ್ರೀ ಎಂ.ಪಿ.ಎಲ್ ಶಾಸ್ತ್ರಿಯವರ ಲೇಖನ ಕಳುಹಿಸಿರುವಿರಿ. ಬೃಹಚ್ಚರಣ ಸಮುದಾಯದ ಹಿರಿಯರ ಬಗ್ಗೆ ತಿಳಿಸಿದಲ್ಲಿ ಪ್ರಕಟಿಸುತ್ತೇವೆ.

**ಸಂಪಾದಕ**

ಶ್ರೀ ಚಂಪಕಧಾಮರವರಿಗೆ ನಮಸ್ಕಾರ.

ನಿಮ್ಮ 3.2.2015 ಪತ್ರದಲ್ಲಿ 'ಬೃಹಚ್ಚರಣ' ಜುಲೈ-ಸೆಪ್ಟೆಂಬರ್ 2015ರಲ್ಲಿ ಪ್ರಕಟವಾದ, ನೆನೆಪಿನಂಗಳ ಛಾಯಾ ಚಿತ್ರ. 5ರ, ಇಸವಿ 1966 ಎಂದು ತಿಳಿಸಿರುವಿರಿ ಧನ್ಯವಾದ.

**ಸಂಪಾದಕ**

### ಸಂಘದ ಹೊಸ ಸದಸ್ಯರು

| | |
|---|---|
| ಇಂದಿರಾ ಜಿ. | ಎಂ 445 |
| . ಮೀರಾ ಕೃಷ್ಣಮೂರ್ತಿ | ಎಂ 446 |
| . ಶ್ರೀನಿವಾಸ ರಂಗನ್ | ಎಂ 447 |
| . ನಾಗರಾಜ ಎಸ್. | ಎಂ 448 |
| . ರಾಧಾಕೃಷ್ಣ ಬಿ.ಎಸ್. | ಎಂ 449 |
| . ಡಾ॥ ಎ.ಎಸ್. ಆದಿಶೇಷನ್ | ಎಂ 450 |

### ಸಂಘಕ್ಕೆ ಹೊಸ ಪೋಷಕರು

| | |
|---|---|
| ಲಲಿತಾಮೂರ್ತಿ | p 82 |
| . ಬಿ.ಎಸ್. ಕೃಷ್ಣಮೂರ್ತಿ | p 83 |
| . ಎಂ.ಪಿ. ರಂಗನಾಥನ್ | |

### 'ಬೃಹಚ್ಚರಣ' ಪತ್ರಿಕೆಯ ಪ್ರಾಯೋಜಕರು

| | |
|---|---|
| ವಿಕ್ರಮ್, | ರೂ. 1000/- |
| . ಸುಬ್ರಹ್ಮಣ್ಯಂ, ಬೆಂಗಳೂರು, | ರೂ. 1000/- |

### ಶಾಶ್ವತ ಅನ್ನ ಸಂತರ್ಪಣಾ ನಿಧಿಗೆ ಪ್ರಾಯೋಜಕರು

ಸರಸ್ವತಿ ನಟರಾಜನ್
. ಕೆ.ಬಿ. ದಾಸ್
. ಎಂ.ಪಿ. ರಂಗನಾಥನ್

Book-Post

To,

128 P 075 LALITHA RAMESH
# 626/14 5TH MAIN
4TH BLOCK
RAJAJINAGAR

Published by Sri S. Somasundara, President, 'BRIHACHARANA SAN
Printed at **Ila Mudrana**, No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com